(3) 3ನೇ ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ವಿಧಿಸತಕ್ಕ ದಿನಾಂಕದ ತರುವಾಯದ ಯಾವುದೇ ಒಂದು ತಿಂಗಳಿನಲ್ಲಿ ತೆರಿಗೆಗೆ ಗುರಿಯಾಗತಕ್ಕ ವಹಿವಾಟು ಹದಿನೈದು ಸಾವಿರ ರೂಪಾಯಿಗಳನ್ನು ಮೀರುವ ಪ್ರತಿಯೊಬ್ಬ ವ್ಯಾಪಾರಿಯು ತಕ್ಷಣ ನೋಂದಾಯಿತನಾಗತಕ್ಕದ್ದು.

xx xx xx

27. ನೋಂದಣಿಯ ರದ್ದಿಯಾತಿ.– (1) ಈ ಮುಂದಿನ ಯಾವುದೇ ಸಂದರ್ಭದಲ್ಲಿ ಎಂದರೆ,–

(ಎ) ಒಬ್ಬ ನೋಂದಾಯಿತ ವ್ಯಾಪಾರಿಯು ಯಾವುದೇ ವ್ಯಾಪಾರವನ್ನು ಮುಂದುವರೆಸದಿದ್ದಲ್ಲಿ, ಪೂರ್ಣವಾಗಿ ವರ್ಗಾಯಿಸಿದ್ದಲ್ಲಿ ಅಥವಾ ಅನ್ಯಥಾ ವಿಲೆ ಮಾಡಿದ್ದಲ್ಲಿ; ಅಥವಾ

(ಬಿ) ವ್ಯಾಪಾರದ ಮಾಲೀಕತ್ವದ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗಿದ್ದಲ್ಲಿ; ಅಥವಾ

(ಸಿ) ನೋಂದಾಯಿತ ವ್ಯಾಪಾರಿಯ ಸರಕುಗಳ ಮಾರಾಟದ ತೆರಿಗೆಗೆ ಗುರಿಯಾಗತಕ್ಕ ವಹಿವಾಟು ಹನ್ನೆರಡು ನಿರಂತರ ತಿಂಗಳುಗಳ ಯಾವುದೇ ಅವಧಿಯಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ; ಅಥವಾ

(ಡಿ) ಒಬ್ಬ ವ್ಯಾಪಾರಿಯು ಯಾವುದೇ ತೆರಿಗೆಗೆ ಗುರಿಯಾಗತಕ್ಕ ಮಾರಾಟವನ್ನು ಮಾಡದೆ ತೆರಿಗೆಯ ಬೆಲೆ ಪಟ್ಟಿಗಳನ್ನು ನೀಡಿದಲ್ಲಿ, ಅಥವಾ

(ಇ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯು ಮೃತನಾದಲ್ಲಿ,

– ಮತ್ತು ಯಾವುದೇ ಉಚಿತ ಮತ್ತು ಸಾಕಷ್ಟು ಕಾರಣಗಳಿದ್ದರೆ, ನಿಯಮಿಸಲಾದ ಪ್ರಾಧಿಕಾರವು, ತಾನಾಗಿಯೇ ಆಗಲಿ ಅಥವಾ ವ್ಯಾಪಾರಿಯು ನೀಡಿದ ಅರ್ಜಿಯ ಮೇಲಾಗಲಿ ಅಥವಾ ಮರಣದ ಸಂದರ್ಭದಲ್ಲಿ, ನಿಯಮಿಸಲಾದ ವಿಧಾನದಲ್ಲಿ ಕಾನೂನುಬದ್ಧ ವಾರಸುದಾರರ ಅರ್ಜಿಯ ಮೇಲಾಗಲಿ, ಸಂದರ್ಭದ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಯಾವುದೇ ಪೂರ್ವ ದಿನಾಂಕವನ್ನು ಒಳಗೊಂಡಂತೆ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ದಿನಾಂಕದಿಂದ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಬಹುದು.

XX XX XX

31. ಲೆಕ್ಕ ಪತ್ರಗಳು.– (1) ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮತ್ತು ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸದಾಯ ಮಾಡಲು ಬದ್ಧನಾದ ಪ್ರತಿಯೊಬ್ಬ ವ್ಯಾಪಾರಿಯು, ಸಂದಾಯ ಮಾಡಿದ ಹೂಡುವಳಿ ತೆರಿಗೆ ಮತ್ತು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯೂ ಸೇರಿದಂತೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ಪ್ರತಿಯೊಂದು ದರಕ್ಕೆ ಒಳಪಟ್ಟ ಸರಕುಗಳ ಮೌಲ್ಯಗಳನ್ನು ತೋರಿಸುವ ತನ್ನ ಎಲ್ಲಾ ಖರೀದಿಗಳ, ಸ್ವೀಕೃತಿಗಳ, ಮಾರಾಟಗಳ, ಇತರ ವಿಲೆಗಳ, ಉತ್ಪಾದನೆಯ, ತಯಾರಿಕೆಯ ಮತ್ತು ದಾಸ್ತಾನಿನ ನಿಜವಾದ ಮತ್ತು ಸರಿಯಾದ ಲೆಕ್ಕ ಪತ್ರಗಳನ್ನು ಕನ್ನಡ ಅಥವಾ ಇಂಗ್ಲೀಷ್ ಅಥವಾ ಹಿಂದಿ ಅಥವಾ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಇತರ ಭಾಷೆಯಲ್ಲಿ ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

XX XX XX

(4) ಯಾರ ಒಟ್ಟು ವಹಿವಾಟು ಒಂದು ವರ್ಷದಲ್ಲಿ ನಲವತ್ತು ಲಕ್ಷ ರೂಪಾಯಿಗಳನ್ನು ಮೀರುವುದೋ, ಆ ಪ್ರತಿಯೊಬ್ಬ ವ್ಯಾಪಾರಿಯು, ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಮಿತಿಗಳಿಗೆ ಒಳಪಟ್ಟು ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್ ಅಥವಾ ಒಬ್ಬ ತೆರಿಗೆ ವೃತ್ತಿದಾರನಿಂದ ಪರಿಶೋಧಿಸತಕ್ಕದ್ದು ಮತ್ತು ಪರಿಶೋಧಿತ ಲೆಕ್ಕಪತ್ರಗಳ ವಿವರಣ ಪಟ್ಟಿಯ ಒಂದು ಪ್ರತಿಯನ್ನು ಮತ್ತು ನಿಯಮಿಸಲಾದ ದಸ್ತಾವೇಜುಗಳನ್ನು, ನಿಯಮಿಸಲಾದ ರೀತಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

XX XX XX

35. ವಿವರ ಪಟ್ಟಿಗಳು.– (1) (2) ರಿಂದ (4)ನೇ ಉಪಪ್ರಕರಣಗಳಿಗೆ ಒಳಪಟ್ಟು ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮತ್ತು 9ನೇ ಪ್ರಕರಣದ (2)ನೇ ಉಪ–ಪ್ರಕರಣದ ಅಡಿಯಲ್ಲಿ ಸಂಗ್ರಹಿಸಲಾದ ತೆರಿಗೆ ಸಂದಾಯಕ್ಕೆ ಬದ್ಧವಾದ ಕೇಂದ್ರ ಸರ್ಕಾರ, ಒಂದು ರಾಜ್ಯ ಸರ್ಕಾರ, ಶಾಸನಬದ್ಧ ನಿಕಾಯ ಮತ್ತು ಒಂದು ಸ್ಥಳೀಯ ಪ್ರಾಧಿಕಾರವು ಎಲೆಕ್ಟ್ರಾನಿಕ್

ವಿಧಾನಗಳು ಸೇರಿದಂತೆ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಒಂದು ವಿವರ ಪಟ್ಟಿಯನ್ನು ಒದಗಿಸತಕ್ಕದ್ದು ಮತ್ತು ನಿಯಮಿಸಬಹುದಾದಂತೆ ಹಿಂದಿನ ತಿಂಗಳ ಕೊನೆಯ ತರುವಾಯದ ಇಪ್ಪತ್ತು ದಿನಗಳೊಳಗೆ ಅಥವಾ ಹದಿನೈದು ದಿನಗಳೊಳಗೆ ಅಥವ ಇತರೆ ಯಾವುದೇ ತೆರಿಗೆ ಅವಧಿಯೊಳಗೆ ಅಂಥ ವಿವರ ಪಟ್ಟಿಯು ಮೇಲೆ ಬಾಕಿ ಇರುವ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

xx xx xx

53. ಚೆಕ್ ಪೋಸ್ಟ್‌ಗಳ ಸ್ಥಾಪನೆ ಮತ್ತು ಸಾಗಣೆಯಲ್ಲಿರುವ ಸರಕುಗಳ ಪರಿಶೀಲನೆ.– (1) ರಾಜ್ಯದಲ್ಲಿನ ಯಾವುದೇ ಸ್ಥಳ ಅಥವಾ ಸ್ಥಳಗಳಲ್ಲಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ತಪ್ಪಿಸುವುದನ್ನು ತಡೆಹಿಡಿಯುವ ಅಥವಾ ಪ್ರತಿಬಂಧಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಅಥವಾ ಆಯುಕ್ತನು ಅವಶ್ಯಕವೆಂದು ಪರಿಗಣಿಸಿದಲ್ಲಿ ಅದು ಅಥವಾ ಅವನು, ಅಧಿಸೂಚಿಸಬಹುದಾದಂತೆ ಅಂಥ ಸ್ಥಳ ಅಥವಾ ಸ್ಥಳಗಳಲ್ಲಿ ಚೆಕ್‌ಪೋಸ್ಟ್‌ನ್ನು ಅಥವಾ ಸುಂಕದ ಕಟ್ಟೆಯನ್ನು ಅಥವಾ ಅವೆರಡನ್ನು ಸ್ಥಾಪಿಸುವಂತೆ ಅಧಿಸೂಚನೆಯ ಮೂಲಕ, ನಿರ್ದೇಶಿಸಬಹುದು.

(2) ಒಂದು ಸರಕು ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯ ಮಲೀಕ ಅಥವಾ ಪ್ರಭಾರ ಹೊಂದಿದ ವ್ಯಕ್ತಿಯು,–

(ಎ) ತನ್ನ ಜೊತೆಯಲ್ಲಿ ಸಂದರ್ಭಾನುಸಾರ ಸರಕು ವಾಹನದ ದಾಖಲೆ, ಟ್ರಿಪ್‌ಶೀಟ್ ಅಥವಾ ಲಾಗ್ ಪುಸ್ತಕವನ್ನು ಒಯ್ಯತಕ್ಕದ್ದು; ಮತ್ತು

(ಬಿ) ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯಲ್ಲಿ ಸಾಗಿಸುತ್ತಿರುವ ಸರಕುಗಳಿಗೆ ಸಂಬಂಧ ಪಟ್ಟಂತೆ, ನಿಯಮಿಸಬಹುದಾದಂಥ ಅಥವಾ ಆಯುಕ್ತರು ಅಧಿಸೂಚಿಸಬಹುದಾವಂತೆ ದಸ್ತಾವೇಜುಗಳನ್ನು ತನ್ನ ಜೊತೆಯಲ್ಲಿ ತೆಗೆದುಕೊಂಡು ಒಯ್ಯತಕ್ಕದ್ದು; ಮತ್ತು

(ಸಿ) ತಾನು ಹೋಗಬೇಕಾದ ಸ್ಥಳಕ್ಕೆ ಸರಕಿನ ಸಾಗಣೆಯ ರಾಜ್ಯದಲ್ಲಿನ ಯಾವ ಸ್ಥಳದಿಂದ ಪ್ರಾರಂಭವಾಗುತ್ತದೋ ಆ ಸ್ಥಳದಿಂದ ಸಾಧಾರಣವಾಗಿ ಸಾಗುವ ಮಾರ್ಗದಲ್ಲಿ

ಇರುವಂಥ ಮೊದಲ ಚೆಕ್‌ಪೋಸ್ಟ್‌ನಲ್ಲಿ ಅಥವಾ ಸುಂಕದ ಕಟ್ಟೆಯಲ್ಲಿ ಸದರಿ ಚೆಕ್‌ಪೋಸ್ಟಿನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಯಾವೊಬ್ಬ ಅಧಿಕಾರಿಯ ಅಥವಾ ಇದಕ್ಕಾಗಿಯೇ ರಾಜ್ಯ ಸರ್ಕಾರದಿಂದ ಪ್ರಾಧಿಕೃತನಾಗ ಬಹುದಾದ ಯಾವೊಬ್ಬ ಇತರ ಅಧಿಕಾರಿಯ ಎದುರಿಗೆ ವರದಿ ಮಾಡಿಕೊಳ್ಳತಕ್ಕದ್ದು ಮತ್ತು (ಎ) ಮತ್ತು (ಬಿ) ಖಂಡಗಳಲ್ಲಿ ಉಲ್ಲೇಖಿಸಲಾದ ದಸ್ತಾವೇಜುಗಳನ್ನು ಹಾಜರು ಪಡಿಸತಕ್ಕದ್ದು ಮತ್ತು ಅದರ ಮೇಲೆ ಅಂಥ ಅಧಿಕಾರಿಯ ಮೊಹರನ್ನು ಪಡೆಯತಕ್ಕದ್ದು ಮತ್ತು ರವಾನೆ ಚೀಟಿಗೆ ಸಂಬಂಧಪಟ್ಟಂತೆ ಮೂಲಪ್ರತಿಯೆಂದು ಗುರುತಿಸಲಾದ ಒಂದು ಪ್ರತಿಯನ್ನು ಅಂಥ ಅಧಿಕಾರಿಗೆ ನೀಡತಕ್ಕದ್ದು ಮತ್ತು ಇನ್ನೊಂದು ಪ್ರತಿಯನ್ನು ಸರಕುಗಳ ಸಾಗಣೆಯು ಕೊನೆಗೊಳ್ಳುವವರೆಗೆ ತನ್ನಲ್ಲಿ ಉಳಿಸಿಕೊಳ್ಳತಕ್ಕದ್ದು; ಮತ್ತು

(12) (ಎ) ಚೆಕ್‌ಪೋಸ್ಟ್‌ನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿ ಅಥವಾ ಯಾವೊಬ್ಬ ಇತರ ಅಧಿಕಾರಿಯು (2)ನೇ ಉಪ–ಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಗೆ ಅಥವಾ ಪಾಲಿಸದಿರುವುದಕ್ಕೆ ಸಂಬಂಧಪಟ್ಟಂತೆ, ಸಾಕಷ್ಟು ಕಾರಣಗಳನ್ನು ಒದಗಿಸದಿದ್ದಾಗ ಈ ಮುಂದಿನಂತೆ ದಂಡವನ್ನು ವಿಧಿಸಬಹುದು, ಅದು,–

(i) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯು ತಾನು ಸರಕುಗಳನ್ನು ಕಳುಹಿಸುವವನು ಅಥವಾ ಸರಕುಗಳನ್ನು ಪಡೆಯುವವನು ಎಂಬುದಾಗಿ ಅವನು ಒಪ್ಪಿದಲ್ಲಿ, (2)ನೇ ಉಪ–ಪ್ರಕರಣದ (ಸಿ) ಖಂಡದ ಅಥವಾ (ಡಿ) ಖಂಡದ ಉಲ್ಲಂಘನೆಯಲ್ಲಿ ಸಾಗಣೆಯಲ್ಲಿರುವ ಸರಕುಗಳಿಗೆ ಸಂಬಂಧಪಟ್ಟಂತೆ ವಿಧಿಸಬಹುದಾದ ದಂಡವು ಅವುಗಳಿಗೆ ವಿಧಿಸಬಹುದಾದ ತೆರಿಗೆ ಮೊಬಲಗಿಗಿಂತ ಕಡಿಮೆ ಇರತಕ್ಕದ್ದಲ್ಲ ಆದರೆ, ಅಂಥ ತೆರಿಗೆಯ ಮೊಬಲಗಿನ ಒಂದೂವರೆ ಪಟ್ಟನ್ನು ಮೀರತಕ್ಕದ್ದಲ್ಲ;

(ii) (1)ನೇ ಬಾಬ್ತಿನ ಅಡಿಯಲ್ಲಿ ಬರುವವುಗಳ ಹೊರತಾದ ಸಂದರ್ಭಗಳಲ್ಲಿ, ಇತರ ಸಂದರ್ಭಗಳಲ್ಲಿ, ವಿಧಿಸಬಹುದಾದ ದಂಡವು, ಸಾಗಣೆಯಲ್ಲಿರುವ ಸರಕುಗಳ ಸಂಬಂಧದಲ್ಲಿ ವಿಧಿಸಬಹುದಾದ ತೆರಿಗೆಯ ಮೊಬಲಗಿನ ಎರಡರಷ್ಟಕ್ಕೆ ಕಡಿಮೆ ಇರತಕ್ಕದ್ದಲ್ಲ, ಆದರೆ, ತೆರಿಗೆಯ ಮೊಬಲಗಿನ ಮೂರುಪಟ್ಟನ್ನು ಮೀರತಕ್ಕದ್ದಲ್ಲ.

(ಬಿ) ವಿಧಿಸಬಹುದಾದ ದಂಡದ ಮೊಬಲಗು, ಸರಕುಗಳ ಮೌಲ್ಯಕ್ಕಿಂತ ಹೆಚ್ಚಿನದ್ದಾಗಿದ್ದರೆ, ವಿಧಿಸಬಹುದಾದ ದಂಡದ ಮೊಬಲಗನ್ನು ಅಂಥ ಮೌಲ್ಯಕ್ಕೆ ಸೀಮಿತಗೊಳಿಸತಕ್ಕದ್ದು.

(ಸಿ) ಮೇಲಿನ (10)ನೇ ಉಪ–ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳಲ್ಲಿ, ವಿಧಿಸಲಾದ ದಂಡವನ್ನು ಸಂದಾಯ ಮಾಡದಿದ್ದಲ್ಲಿ, ಸಾಗಾಣಿಕೆದಾರ ಅಥವಾ ಸರಕು ರಕ್ಷಕ ಅಥವಾ ಸರಕು ವಾಹನಗಳ ಪ್ರಭಾರದಲ್ಲಿರುವ ವ್ಯಕ್ತಿಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸಂದಾಯ ಮಾಡಲು ಬದ್ಧನಾಗತಕ್ಕದ್ದು.

(ಡಿ) ಈ ಉಪ–ಪ್ರಕರಣದ ಅಡಿಯಲ್ಲಿನ ಯಾವುದೇ ದಂಡವನ್ನು ವಿಧಿಸುವುದಕ್ಕೆ ಮೊದಲು, ಅಧಿಕಾರಿಯು, ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯ ಪ್ರಭಾರದಲ್ಲಿರುವ ವ್ಯಕ್ತಿಗೆ, ಸಾಗಾಣಿಕೆದಾರನಿಗೆ, ಸರಕು ರಕ್ಷಕನಿಗೆ ಅಥವಾ ಸಂದರ್ಭಾನುಸಾರ, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ವ್ಯಾಪಾರಿಗೆ, ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

xx xx xx

54. ರಾಜ್ಯದ ಮೂಲಕ ರಸ್ತೆ ಮಾರ್ಗವಾಗಿ ಸರಕುಗಳ ಸಾಗಣೆ ಮತ್ತು ಸಾಗಣೆ ಪಾಸ್ ನೀಡುವುದು.– (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವ ಸರಕುಗಳನ್ನು ಕೊಂಡೊಯ್ಯುತ್ತಿರುವ ಒಂದು ವಾಹನವು,

(ಎ) ರಾಜ್ಯದ ಹೊರಗಿನ ಯಾವುದೇ ಸ್ಥಳದಿಂದ ಮತ್ತು ರಾಜ್ಯದ ಹೊರಗಿನ ಯಾವುದೇ ಸ್ಥಳಕ್ಕಾಗಿ ರಾಜ್ಯದ ಮೂಲಕ ಹಾದು ಹೋದರೆ; ಅಥವಾ

(ಬಿ) ದೇಶದ ಹೊರಗಿನ ಯಾವುದೇ ಸ್ಥಳದಿಂದ ರಾಜ್ಯಕ್ಕೆ ಆಮದು ಮಾಡಿಕೊಂಡರೆ ಮತ್ತು ಅಂಥ ಸರಕುಗಳನ್ನು ರಾಜ್ಯದ ಹೊರಗಿನ ಯಾವುದೇ ಸ್ಥಳಕ್ಕೆ ಕೊಂಡೊಯ್ದರೆ;

– ಅಂಥ ವಾಹನದ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ಯಾವೊಬ್ಬ ಇತರ ವ್ಯಕ್ತಿಯು ಅವಶ್ಯಕವಿರುವ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡ ಒಂದು ಸಾಗಣೆ ಪಾಸನ್ನು ದ್ವಿಪ್ರತಿಯಲ್ಲಿ, ಅವನು ರಾಜ್ಯದೊಳಗೆ ಪ್ರವೇಶಿಸಿದ ತರುವಾಯ ಅಥವಾ ಸಂದರ್ಭಾನುಸಾರ ರಾಜ್ಯದಿಂದ ಸಾಗಣೆಯು ಪ್ರಾರಂಭಗೊಂಡ ತರುವಾಯ ಮೊದಲನೇ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಅಥವಾ ಸರಕು ವಾಹನವು ರಾಜ್ಯದೊಳಕ್ಕೆ ಪ್ರವೇಶಿಸಿದ ತರುವಾಯ ತಡೆದು ನಿಲ್ಲಿಸಿದ ಮೇಲೆ ಅಥವಾ ಸಂದರ್ಭಾನುಸಾರ ಸಾಗಣೆ ಪ್ರಾರಂಭಗೊಂಡ ತರುವಾಯ, 52ನೇ ಪ್ರಕರಣದ (3)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಪ್ರಾಧಿಕೃತನಾದ ಅಧಿಕಾರಿಯಿಂದ ಪಡೆದುಕೊಳ್ಳತಕ್ಕದ್ದು.

XX XX XX

72. ವಿವರ ಪಟ್ಟಿಗಳಿಗೆ ಮತ್ತು ತೆರಿಗೆ ನಿರ್ಧರಣಕ್ಕೆ ಸಂಬಂಧಿಸಿದ ದಂಡಗಳು.– (1) XX

(2) ಒಬ್ಬ ವ್ಯಾಪಾರಿಯು, ಯಾವುದೇ ನಿಯಮಿಸಲಾದ ತೆರಿಗೆ ಅವಧಿಗಾಗಿ ಒಂದು ವಿವರ ಪಟ್ಟಿಯನ್ನು ಸಲ್ಲಿಸಿದ್ದು, ಅದು ಅವನ ತೆರಿಗೆ ಬದ್ಧತೆಯನ್ನು ಕಡಿಮೆ ತೋರಿಸಿದರೆ ಅಥವಾ ಅವನ ವಾಸ್ತವಿಕ ತೆರಿಗೆ ಬದ್ಧತೆಯ ಅಥವಾ ಸಂದರ್ಭಾನುಸಾರ ಅವನ ವಾಸ್ತವಿಕ ತೆರಿಗೆ ಜಮೆಯ ಶೇಕಡ ಐದಕ್ಕಿಂತ ಹೆಚ್ಚು ತೆರಿಗೆ ಜಮೆಗೆ ಅವನ ಹಕ್ಕುದಾರಿಕೆಯನ್ನು ಹೆಚ್ಚಿಗೆ ತೋರಿಸಿದರೆ, ಅವನಿಗೆ ದಂಡ ವಿಧಿಸುವಿಕೆಯ ವಿರುದ್ಧ ಲಿಖಿತದಲ್ಲಿ ಕಾರಣ ತೋರಿಸಲು ಅವಕಾಶ ನೀಡಲಾದ ತರುವಾಯ, ಕಡಿಮೆ ಅಥವಾ ಹೆಚ್ಚಿಗೆ ತೋರಿಸಿದ ಅಂಥ ತೆರಿಗೆ ಮೊಬಲಗಿನ ಶೇಕಡಾ ಹತ್ತಕ್ಕೆ ಸಮನಾದ ದಂಡಕ್ಕೆ ಬದ್ಧನಾಗಿರತಕ್ಕದ್ದು.

XX XX XX

ಮೂರನೇ ಅನುಸೂಚಿ

ಶೇಕಡಾ ನಾಲ್ಕರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

[4(1) (ಎ) (ii)ನೇ ಪ್ರಕರಣ]

[ಪ್ರಕರಣ4(1) (ಸಿ) ಕ್ರಮ ಸಂಖ್ಯೆ	ಕಾಮಗಾರಿಗಳ ಕರಾರಿನ ವಿವರಣೆ	ತೆರಿಗೆಯ ದರ
1	2	3
1.	ಕೈಯಿಂದ ನಡೆಸದಿರುವ ಅಥವಾ ಪ್ರಾಣಿಗಳಿಂದ ಎಳೆಸದಿರುವ ಕೃಷಿ ಉಪಕರಣಗಳು	
2.	ಹಾರು ಬೂದಿ (ಫ್ಲೈ ಆ್ಯಷ್) ಇಟ್ಟಿಗೆಗಳು, ರಿಫ್ರ್ಯಾಕ್ಟರಿ ಇಟ್ಟಿಗೆಗಳು ಮತ್ತು ಅಂತಹವುಗಳನ್ನು ಒಳಗೊಂಡಂತೆ ಎಲ್ಲಾ ಬಗೆಯ ಇಟ್ಟಿಗೆಗಳು, ಡಾಂಬರು ಲೇಪಿತ ಮೇಲ್ಪಾವಣಿ ಹಾಳೆಗಳು, ಮಣ್ಣಿನ ಹಂಚುಗಳು	

xx xx xx

ಆರನೇ ಅನುಸೂಚಿ

[ಪ್ರಕರಣ 4(1) (ಸಿ)]

ಕ್ರ. ಸಂ.	ಕಾಮಗಾರಿಗಳ ಕರಾರಿನ ವಿವರಣೆ	ತೆರಿಗೆಯ ದರ
1	2	3
1	ಸರಕುಗಳ ಬಾಟ್ಲಿಂಗ್, ಕ್ಯಾನಿಂಗ್ ಮತ್ತು ಪ್ಯಾಕಿಂಗ್	ಶೇಕಡಾ ನಾಲ್ಕು
2	ಬಟ್ಟೆಗಳಿಗೆ ಬಣ್ಣ ಹಾಕುವುದು ಮತ್ತು ಪ್ರಿಂಟ್ ಮಾಡುವುದು	ಶೇಕಡಾ ನಾಲ್ಕು
3	ಇಲೆಕ್ಟ್ರೋ ಪ್ಲೇಟಿಂಗ್, ಇಲೆಕ್ಟ್ರೋ ಗಾಲ್ವನೈಸಿಂಗ್, ಆ್ಯನೋಡೈಜಿಂಗ್ ಮತ್ತು ಅಂಥವೇ	ಶೇಕಡಾ ನಾಲ್ಕು

4	ಕಬ್ಬಿಣದ ಆಸರೆ ಕಟ್ಟುಗಳು, ಉದ್ದಸರಗಳು, ಇತ್ಯಾದಿಗಳ ನಿರ್ಮಾಣ ಸರಬರಾಜು ಮತ್ತು ಕಟ್ಟುವಿಕೆ ಒಳಗೊಂಡು ರಚನಾ ಕಾಮಗಾರಿಗಳ ನಿರ್ಮಾಣ ಮತ್ತು ಕಟ್ಟುವಿಕೆ,	ಶೇಕಡಾ ನಾಲ್ಕು
5	ಮೂರನೇ ಅನುಸೂಚಿಯಲ್ಲಿನ 20ನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟ ಪಡಿಸಿದ ಬಂಡವಾಳ ಸರಕುಗಳ ನಿರ್ಮಾಣ ಅಥವಾ ಸರಬರಾಜು ಮತ್ತು ಸ್ಥಾಪನೆ	ಶೇಕಡಾ ನಾಲ್ಕು
6	ಪೌಡರ್ ಕೋಟಿಂಗನ್ನು ಒಳಗೊಂಡಂತೆ ಲ್ಯಾಮಿನೇಷನ್, ರಬ್ಬರೈಸೇಷನ್, ಕೋಟಿಂಗ್ ಮತ್ತು ಅಂಥವೇ ಸಂಸ್ಕರಣ	ಶೇಕಡಾ ನಾಲ್ಕು
7	ಅಮೂಲ್ಯ ಅಥವಾ ಅರೆ ಅಮೂಲ್ಯ ಹರಳು ಗಳನ್ನು ಹುದುಗಿಸಿರಲಿ ಅಥವಾ ಹುದುಗಿಸಿರ ದಿರಲಿ ಚಿನ್ನದ, ಬೆಳ್ಳಿಯ ಮತ್ತು ಇತರೆ ಅಮೂಲ್ಯ ಲೋಹದ ಒಡವೆಗಳು ಮತ್ತು ವಸ್ತುಗಳ ತಯಾರಿಕೆ ಅಥವಾ ಸಂಸ್ಕರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
8	ಮುದ್ರಣ ಮತ್ತು ಬ್ಲಾಕ್ ತಯಾರಿಕೆ	ಶೇಕಡಾ ನಾಲ್ಕು
9	ಫೋಟೋಗ್ರಾಫ್ಸ್, ಫೋಟೋ ಪ್ರಿಂಟ್ಸ್ ಮತ್ತು ಫೋಟೋ ನೆಗೆಟಿವ್‌ಗಳ ಸಂಸ್ಕರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
10	ಸಿನಿಮಾಟೋಗ್ರಾಫಿಕ್ ಫಿಲ್ಮ್‌ಗಳ ಸಂಸ್ಕರಣ ಮುದ್ರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
11	ಕಂಪ್ಯೂಟರ್ ಸಾಫ್ಟ್‌ವೇರ್ ಪ್ರೋಗ್ರಾಮಿಂಗ್ ಮತ್ತು ಅದನ್ನು ಒದಗಿಸುವುದು	ಶೇಕಡಾ ನಾಲ್ಕು
12	ಪ್ಲಂಬಿಂಗ್‌ಗಾಗಿ, ಚರಂಡಿಗಾಗಿ ಮತ್ತು ಅಂಥ ಕಾರ್ಯಗಳಿಗಾಗಿ ಹೊರತು ಇತರೆ ಉದ್ದೇಶ ಗಳಿಗಾಗಿ ಸ್ಟೀಲ್ ಪೈಪ್‌ಗಳನ್ನು ಒದಗಿಸುವುದು ಮತ್ತು ಜೋಡಿಸುವುದು.	ಶೇಕಡಾ ನಾಲ್ಕು

13	ಎಲೆಕ್ಟ್ರಿಕಲ್ ಮೋಟಾರುಗಳ ರೀವೈಂಡಿಂಗ್	ಶೇಕಡಾ ನಾಲ್ಕು
14	ಮೂರನೇ ಅನುಸೂಚಿಯ 53ನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಟೆಲಿಕಮ್ಯೂನಿಕೇಷನ್ ಸಾಧನ ಸಲಕರಣೆಗಳೂ ಸೇರಿದಂತೆ ಐ.ಟಿ. ಉತ್ಪನ್ನಗಳ ಸರ್ವೀಸ್ ಮತ್ತು ನಿರ್ವಹಣೆ	ಶೇಕಡಾ ನಾಲ್ಕು
15	ನೂಲಿನ ಸೈಜಿಂಗ್ ಮತ್ತು ಬಣ್ಣ ಹಾಕುವುದು	ಶೇಕಡಾ ನಾಲ್ಕು
16	ಎಲೆಕ್ಟ್ರಿಕಲ್ ಟ್ರಾನ್ಸ್‌ಮಿಷನ್ ಟವರ್‌ಗಳ ಸರಬರಾಜು ಮತ್ತು ನಿರ್ಮಾಣ	ಶೇಕಡಾ ನಾಲ್ಕು
17	ಷಾಬಾದ್ ಸ್ಲ್ಯಾಬುಗಳು ಮತ್ತು ಕಲ್ಲುಗಳ ಸರಬರಾಜು ಮತ್ತು ಜೋಡಣೆ	ಶೇಕಡಾ ನಾಲ್ಕು
18	ಸೆಂಟ್ರಿಫ್ಯುಗಲ್ ಮನೋಬ್ಲಾಕ್ ಮತ್ತು ಸಬ್ ಮರ್ಸಿಬಲ್ ಪಂಪ್‌ಸೆಟ್ಟುಗಳ ಸರಬರಾಜು ಮತ್ತು ಜೋಡಣೆ	ಶೇಕಡಾ ನಾಲ್ಕು
19	ದಪ್ಪ ಜಲ್ಲಿ ಕಲ್ಲುಗಳ ಸರಬರಾಜು ಮತ್ತು ಹರಡುವುದು.	ಶೇಕಡಾ ನಾಲ್ಕು
20	ಪುನರ್ನವೀಕರಿಸಬಹುದಾದ ಊರ್ಜಾಶಕ್ತಿ ಉಪಕರಣಗಳ ಸರಬರಾಜು, ನಿರ್ಮಾಣ, ಸ್ಥಾಪನೆ ಮತ್ತು ಕಾರ್ಯಪಾಲನೆ	ಶೇಕಡಾ ನಾಲ್ಕು
21	ಟೈರು ರಿಟ್ರೆಡ್ಡಿಂಗ್	ಶೇಕಡಾ ನಾಲ್ಕು
22	ಮೇಲಿನ ಎರಡು ಅಥವಾ ಹೆಚ್ಚಿನ ಪ್ರವರ್ಗಗಳನ್ನು ಒಳಗೊಂಡ ಸಂಯೋಜಿತ ಕರಾರುಗಳು	ಶೇಕಡಾ ನಾಲ್ಕು
23	ಮೇಲಿನ ಒಂದು ಅಥವಾ ಹೆಚ್ಚಿನ ಪ್ರವರ್ಗಗಳೊಂದಿಗೆ ಸಂಯೋಜಿತ ಕರಾರುಗಳೂ ಸೇರಿದಂತೆ ಮೇಲಿನ ಯಾವುದೇ ಪ್ರವರ್ಗಗಳಲ್ಲಿ ನಿರ್ದಿಷ್ಟ ಪಡಿಸದಿರುವ ಇತರ ಎಲ್ಲಾ ಕಾಮಗಾರಿಗಳ ಕರಾರು.	ಶೇಕಡಾ ನಾಲ್ಕು

ವಿವರಣೆ: ಈ ಅನುಸೂಚಿಯಲ್ಲಿನ ಯಾವುದೇ ಕ್ರಮಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಕಾಮಗಾರಿಗಳ ಕರಾರು ಅಭಿವೃದ್ಧಿ, ಮಾರ್ಪಾಟುಗಳು ಅಥವಾ ದುರಸ್ತಿಗಳನ್ನು ಮಾಡುವುದಕ್ಕಾಗಿನ ಕಾಮಗಾರಿ ಕರಾರುಗಳನ್ನು ಒಳಗೊಳ್ಳತಕ್ಕದ್ದು.

xx xx xx

ಅನುಬಂಧ – IV

ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2010 (2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 13)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು **ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ಅಧಿನಿಯಮ, 2010** ಎಂದು ಕರೆಯತಕ್ಕದ್ದು.

(2) ಇದು 2010ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 9ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಸ್ಟಾಂಪು ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 34) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 9ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ,

(1) (ಎ) ಖಂಡದಲ್ಲಿ,–

(ಎ) ಮೊದಲನೇ ಪರಂತುಕಕ್ಕೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ,–

(i) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆಗಳ ಸಂಕೀರ್ಣ ಉಪಬಂಧಗಳ ಅಧಿನಿಯಮ, 1974 ರಲ್ಲಿ (1975ರ ಅಧಿನಿಯಮ 2) ಪರಿಭಾಷಿಸಲಾದಂತೆ, ಕೃಷಿ ಉದ್ದೇಶಕ್ಕಾಗಿ ಯಾವೊಬ್ಬ ವ್ಯಕ್ತಿಯು ಅಥವಾ ಅವನ ಪರವಾಗಿ ಸಾಲವನ್ನು ಪಡೆಯುವುದಕ್ಕಾಗಿ ಅಥವಾ ಸಂದರ್ಭಾನುಸಾರ ಸಾಲವನ್ನು ಹಿಂದಿರುಗಿಸುವುದಕ್ಕಾಗಿ;

(ii) ಸಾರ್ವಜನಿಕ ವಲಯ ಉದ್ಯಮವು ಅದು ಸ್ಥಾಪಿತವಾದ ಉದ್ದೇಶಕ್ಕಾಗಿ ಸಾಲ ಪಡೆಯುವುದಕ್ಕಾಗಿ;

(iii) ಶಿಕ್ಷಣವನ್ನು ಮುಂದುವರಿಸುವ, ನೀರು ಕೊಯಿಲು ಘಟಕಗಳನ್ನು ಮತ್ತು ಸೌರಶಕ್ತಿ ಮತ್ತು ಜೈವಿಕ ಅನಿಲ ಶಕ್ತಿಗಳಂತಹ ಸಾಂಪ್ರದಾಯಕವಲ್ಲದ ಇಂಧನ ಉಪಕರಣಗಳನ್ನು ಪಡೆದುಕೊಳ್ಳುವ ಮತ್ತು ಸ್ಥಾಪಿಸುವ ಉದ್ದೇಶದಿಂದ ಸಾಲ ಪಡೆದವನು ಅಥವಾ ಅವನ ಪರವಾಗಿ ಸಾಲಗಳನ್ನು ಪಡೆಯುವುದಕ್ಕಾಗಿ ಅಥವಾ ಸಂದರ್ಭಾನುಸಾರವಾಗಿ ಸಾಲವನ್ನು ಮರುಪಾವತಿಸುವುದಕ್ಕಾಗಿ :

– ಬರೆದು ಕೊಟ್ಟ ಲಿಖಿತ ಪತ್ರದ ಮೇಲೆ ಸಂದಾಯ ಮಾಡತಕ್ಕ ಸ್ಟಾಂಪ್ ಸುಂಕವನ್ನು, ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ ಸಾರ್ವಜನಿಕ ಹಿತಾಸಕ್ತಿಯಿಂದ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು.

(ಬಿ) ಮೂರನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಮತ್ತೂ ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ,–

(i) ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಇಂದಿರಾ ಆವಾಸ್ ಯೋಜನೆಯ ಅಡಿಯಲ್ಲಿ ಆರ್ಥಿಕವಾಗಿ

ಹಿಂದುಳಿದ ವರ್ಗಗಳಿಗೆ ಮತ್ತು ವಿಶೇಷ ವೃತ್ತಿನಿರತ ಪ್ರವರ್ಗಗಳಿಗೆ ಕಟ್ಟಲಾದ ಮನೆಗಳು ಒಳಗೊಂಡಂತೆ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ದಲ್ಲಿ, ರಾಜ್ಯ ಸರ್ಕಾರದ ಬಂಡವಾಳ ಹೂಡಿಕೆಯ ಮೂಲಕ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ನಿಗಮದಿಂದ ಸಾಲ ಪಡೆಯುವ ಮೂಲಕ ವಸತಿ ಸೌಲಭ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ, ರಾಜೀವ್‌ಗಾಂಧಿ ಗೃಹ ನಿರ್ಮಾಣ ನಿಗಮವು ಅಥವಾ ನಿಗಮದ ಪರವಾಗಿ;

(ii) ಸಾರ್ವಜನಿಕ ಉದ್ದೇಶಕ್ಕಾಗಿಯೇ ಇರುವ ರಸ್ತೆಗಳು, ನಾಗರೀಕ ಸೌಕರ್ಯಗಳು, ಉದ್ಯಾನವನಗಳು, ನೀರು ಸರಬರಾಜು ನಿಕಾಯಗಳು, ಸಣ್ಣ ಅರಣ್ಯಗಳು, ಬೌಲೇವಾರ್ಡ್ಸ್ ಮುಂತಾದವುಗಳನ್ನು ಒದಗಿಸುವ ಉದ್ದೇಶ ಗಳಿಗಾಗಿ, ಸ್ಥಳೀಯ ನಿಕಾಯಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬೇಕಾದ ಇತರ ಸಾರ್ವಜನಿಕ ಪ್ರಾಧಿಕಾರಗಳ ಪರವಾಗಿ,

– ಅದರಲ್ಲಿ ನಿರ್ದಿಷ್ಟಪಡಿಸಲಾಗುವ ಲಿಖಿತ ಪತ್ರದ ಮೇಲೆ ಸಂದಾಯ ಮಾಡಬೇಕಾದ ಸ್ಟಾಂಪು ಸುಂಕವನ್ನು, ಅಧಿಸೂಚನೆಯ ಮೂಲಕ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು."

3. 45–ಎ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 45–ಎ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ,

(1) (ಹೆಚ್) ಖಂಡದಲ್ಲಿ, "(iv)" ಎಂಬ ಆವರಣ ಚಿಹ್ನೆಗಳು ಮತ್ತು ಅಂಕಿಗಳಿಗೆ, "(vi)" ಎಂಬ ಆವರಣ ಚಿಹ್ನೆಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(2) (ಎನ್) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಒ)" ವರ್ಗಾವಣೆಯಾಗಬಹುದಾದ ಅಭಿವೃದ್ಧಿ ಹಕ್ಕುಗಳು [ಅನುಚ್ಛೇದ 20 (7)]".

4. ಅನುಸೂಚಿಯ ತಿದ್ದುಪಡಿ.– ಅನುಸೂಚಿಯಲ್ಲಿ,–

(1) 5ನೇ ಅನುಚ್ಛೇದದಲ್ಲಿ, (ಇ) ಖಂಡದಲ್ಲಿ,

(ಎ) (i) ನೇ ಉಪಖಂಡದಲ್ಲಿ, 3ನೇ ಅಂಕಣದಲ್ಲಿ, ಈ ಮುಂದಿನ ಪರಂತುಕವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:–

"ಪರಂತು, ಒಂದೇ ಸ್ವತ್ತಿನ ಸಂಬಂಧದಲ್ಲಿ ಅದೇ ಪಕ್ಷಕಾರರ ನಡುವೆ ಆದ ಮುಂಚಿನ ಕರಾರನ್ನು ರದ್ದುಪಡಿಸುವ ಪತ್ರವನ್ನು ಬರೆದುಕೊಟ್ಟಿದ್ದಲ್ಲಿ ಮತ್ತು ಅಂಥ ಕರಾರಿನ ಮೇಲೆ ಸೂಕ್ತ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಿದ್ದಲ್ಲಿ, ಆಗ ಅಂಥ 'ರದ್ದುಪಡಿಸುವ ಪತ್ರದ' ಮೇಲಿನ ಶುಲ್ಕವು ಐದು ನೂರು ರೂಪಾಯಿಗಳನ್ನು ಮೀರತಕ್ಕದ್ದಲ್ಲ."

(ಬಿ)"(ii)"ನೇ ಉಪಖಂಡದಲ್ಲಿ, 3ನೇ ಅಂಕಣದಲ್ಲಿ, ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪ್ರತಿಫಲದ ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯದ ಮೇಲೆ ಗರಿಷ್ಠ ಇಪ್ಪತ್ತು ಸಾವಿರ ರೂಪಾಯಿಗಳು, ಆದರೆ ಕನಿಷ್ಠ ಐದುನೂರು ರೂಪಾಯಿಗಳಿಗೆ ಒಳಪಟ್ಟು ಪ್ರತಿ ನೂರು ರೂಪಾಯಿಗಳು ಅಥವಾ ಅದರ ಭಾಗದ ಮೇಲೆ ಒಂದು ರೂಪಾಯಿ"

(ಸಿ) (ಎಫ್) ಖಂಡದಲ್ಲಿ, 3ನೇ ಅಂಕಣದಲ್ಲಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಅಂಥ ಕರಾರಿನ ವಸ್ತು ವಿಷಯವಾಗಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಅಥವಾ ಅಂಥ ಕರಾರಿನ ಪ್ರತಿಫಲದ ಮೇಲೆ, ಇವುಗಳಲ್ಲಿ ಯಾವದೋ ಹೆಚ್ಚೋ, ಅದರ ಮೇಲೆ, ಗರಿಷ್ಠ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗೆ ಒಳಪಟ್ಟು ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ;

ಪರಂತು, ಒಂದೇ ಸ್ವತ್ತಿನ ಸಂಬಂಧದಲ್ಲಿ ಅದೇ ಪಕ್ಷಕಾರರ ನಡುವೆ ಮಾಡಿಕೊಳ್ಳಲಾದ, ಮುಖ್ತಾರುನಾಮೆಯ ಮೇಲೆ, 41ನೇ ಅನುಚ್ಛೇದದ (ಇಎ) ಖಂಡದಡಿಯಲ್ಲಿ ಸೂಕ್ತ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಿದ್ದರೆ, ಆಗ ಅಂಥ ಕರಾರಿನ ಮೇಲೆ ಚಾರ್ಜು ಮಾಡಬೇಕಾದ ಸ್ಟಾಂಪು ಶುಲ್ಕವು 200/– ರೂಪಾಯಿಗಳನ್ನು ಮೀರತಕ್ಕದ್ದಲ್ಲ."

(ಡಿ) ಖಂಡ (ಐ) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಖಂಡ (ಜೆ) ಎಂದು ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಮರು ಸಂಖ್ಯೆ ನೀಡಿದ ಖಂಡ (ಜೆ)ಗೆ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

(ಐ) ಠೇವಣಿದಾರ ಭಾಗಿಗಳು (ಠೇವಣಿದಾರಿಕೆ ಅಧಿನಿಯಮ, 1996ರಲ್ಲಿ ಪರಿಭಾಷಿಸಲಾದಂತೆ) ಮತ್ತು ಕಕ್ಷಿಗಾರ ಇವರ ನಡುವಿನ ಕರಾರಿಗೆ ಸಂಬಂಧಪಟ್ಟಿದ್ದರೆ, ಡಿ–ಮ್ಯಾಟ್ ಲೆಕ್ಕ ಖಾತೆಯನ್ನು ತೆಗೆಯುವುದಕ್ಕಾಗಿ,	ಐವತ್ತು ರೂಪಾಯಿಗಳು
(ಐಎ) ಸ್ಟಾಕ್ ಬ್ರೋಕರ್ ಅಥವಾ ಸಬ್ ಬ್ರೋಕರ್ (ಏಜೆಂಟ್) ಮತ್ತು ಕಕ್ಷಿಗಾರ (ಪ್ರಧಾನಕರ್ತ) ಇವರ ನಡುವಿನ ಕರಾರಿಗೆ ಸಂಬಂಧ ಪಟ್ಟಿದ್ದರೆ, ಸ್ಟಾಕ್ ಮಾರುಕಟ್ಟೆಗಳ ಕಾರ್ಯನಿರ್ವಹಣೆಗಾಗಿ,	ಐವತ್ತು ರೂಪಾಯಿಗಳು

(2) 6ನೇ ಅನುಚ್ಛೇದದಲ್ಲಿ, (1)ನೇ ಖಂಡದಲ್ಲಿ,–

(i) (ಎ) ಮತ್ತು (ಬಿ) ಉಪಖಂಡಗಳಿಗೆ ಮತ್ತು ಅದಕ್ಕ ಸಂಬಂಧಿಸಿದ ನಮೂದುಗಳಿಗೆ, ವಿವರಣೆಯನ್ನು ಹೊರತುಪಡಿಸಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ;–

"ಕರಾರನ್ನು ಸಾಕ್ಷೀಕರಿಸುವ ಲಿಖಿತ ಪತ್ರದ ದಿನಾಂಕದಿಂದ ಅಂಥ ಸಾಲ ಅಥವಾ ಋಣ ಕೋರಿದಾಗ ಮರು ಸಂದಾಯ ಮಾಡತಕ್ಕದ್ದಾಗಿದ್ದರೆ	ಗರಿಷ್ಠ ರೂ. 50000/– ಗಳಿಗೆ ಒಳಪಟ್ಟು ಆದರೆ ರೂ.500/– ಗಳಿಗೆ ಕಡಿಮೆ ಇಲ್ಲದಂತೆ ಸಾಲ ಅಥವಾ ಋಣದ ಮೊಬಲಗಿನ ಮೇಲೆ ಶೇ. 0.1"

(ii) ವಿವರಣೆಯಲ್ಲಿ, 3ನೇ ಅಂಕಣದಲ್ಲಿ; "ಯಾವುದೇ ತೀರ್ಪು, ಡಿಕ್ರಿ ಅಥವಾ ಯಾವುದೇ ನ್ಯಾಯಾಲಯದ ಆದೇಶದಲ್ಲಿ" ಎಂಬ ಪದಗಳಿಗೆ "ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) 14ನೇ ಅನುಚ್ಛೇದದಲ್ಲಿ,

(ಎ) (ಎ) ಖಂಡದಲ್ಲಿ, 3ನೇ ಅಂಕಣದಲ್ಲಿ, ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಅಂಥ ರದ್ದುಪಡಿಸುವಿಕೆಯು, ಈಗಾಗಲೇ ಮೂಲ ಲಿಖಿತ ಪತ್ರದ ಮೂಲಕ ಹಸ್ತಾಂತರಗೊಂಡ ಸ್ವತ್ತಿನ ಮರು ಹಸ್ತಾಂತರದ ಮೇಲೆ ಪರಿಣಾಮ ಮಾಡಿದ್ದರೆ, ಮೂಲ ಹಸ್ತಾಂತರಣದ ಮೇಲಿನಷ್ಟೇ ಶುಲ್ಕ:.

ಪರಂತು, ಮೂಲ ಲಿಖಿತ ಪತ್ರವು ಮಾರಾಟದ ಮೇಲಿನ ಹಸ್ತಾಂತರಣವಾಗಿದ್ದಲ್ಲಿ, ಆಗ ಅಂಥ ರದ್ದುಪಡಿಸುವಿಕೆಯು ಲಿಖಿತ ಪತ್ರದ ಮೇಲೆ ಸಂದಾಯ ಮಾಡಬೇಕಾದ ಸ್ಟ್ಯಾಂಪು ಶುಲ್ಕವು, ಅನುಚ್ಛೇದ 20(1)ರ ಅನ್ವಯ, ಅಂಥ ರದ್ದುಪಡಿಸುವಿಕೆಯನ್ನು ಬರೆದುಕೊಡುವ ದಿನಾಂಕದಂದು ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ".

(ಬಿ) (ಸಿ) ಖಂಡದಲ್ಲಿ, 2ನೇ ಅಂಕಣದಲ್ಲಿ, "ಇವುಗಳನ್ನು ನೋಡಿ" ಎಂಬ ಪದಗಳಿಗೆ "ಕರಾರು ಅಥವಾ ಅದರ ದಾಖಲೆಗಳು ಅಥವಾ ಒಂದು ಕರಾರು ಜ್ಞಾಪನಪತ್ರ [ಸಂಖ್ಯೆ 5(ಇ) (i)] ಇವುಗಳನ್ನು ನೋಡಿ" ಎಂಬ ಪದಗಳು, ಆವರಣ ಚಿಹ್ನೆಗಳು, ಅಂಕಿ ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು.

(4) 20ನೇ ಅನುಚ್ಛೇದದಲ್ಲಿ,

(ಎ) (2)ನೇ ಖಂಡದಲ್ಲಿ,–

(i) 2ನೇ ಅಂಕಣದಲ್ಲಿ, "ಮೊದಲ ಲಿಖಿತಕ್ಕೆ" ಎಂಬ ಪದಗಳ ತರುವಾಯ "ಲಿಖಿತಕ್ಕೆ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ii) 3ನೇ ಅಂಕಣದಲ್ಲಿ, "ಮೌಲ್ಯದ ಶೇಕಡಾ ಆರು" ಎಂಬ ಪದಗಳಿಗೆ "ನಿರ್ಮಾಣದ ಹಂತವನ್ನು ಗಣನೆಗೆ ತೆಗೆದು

ಕೊಳ್ಳದೆ, ಅವುಗಳನ್ನು ಪೂರ್ಣ ನಿರ್ಮಿತ ಎಂದು ಭಾವಿಸಿ, ಪೂರ್ಣ ನಿರ್ಮಾಣಗೊಂಡ ಫ್ಲಾಟ್‌ಗಳು ಅಥವಾ ಅಪಾರ್ಟ್‌ಮೆಂಟ್‌ಗಳು ಅಥವಾ ಘಟಕದ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ ಮೌಲ್ಯದ ಮೇಲೆ 20(1)ನೇ ಅನುಚ್ಛೇದದಡಿಯಲ್ಲಿ ಹಸ್ತಾಂತರಣವಾದಂತೆ ಅದೇ ಶುಲ್ಕ" ಎಂಬ ಪದಗಳು, ಅಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

(iii) ವಿವರಣೆಯಲ್ಲಿ 2ನೇ ಅಂಕಣದಲ್ಲಿ (ಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

(ಬಿ) (4)ನೇ ಖಂಡದಲ್ಲಿ,–

(i) (i)ನೇ ಉಪಖಂಡದಲ್ಲಿ, 3ನೇ ಅಂಕಣದಲ್ಲಿ, "5%" ಎಂಬ ಅಂಕಿ ಮತ್ತು ಚಿಹ್ನೆಗೆ, "ಶೇಕಡಾ ಮೂರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ii)ನೇ ಉಪಖಂಡದಲ್ಲಿ, 3ನೇ ಅಂಕಣದಲ್ಲಿ, "5%" ಎಂಬ ಅಂಕಿ ಮತ್ತು ಚಿಹ್ನೆಗೆ, "ಶೇಕಡಾ ಮೂರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) (6)ನೇ ಖಂಡದ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(7) ವರ್ಗಾವಣೀಯ ಅಭಿವೃದ್ಧಿ ಹಕ್ಕುಗಳಿಗೆ ಸಂಬಂಧಿಸಿದ ಹಸ್ತಾಂತರಣ ಪತ್ರ	ಹಸ್ತಾಂತರಣದ ವಸ್ತು ವಿಷಯ ವಾಗಿರುವ ಅಂಥ ವರ್ಗಾವಣೀಯ ಅಭಿವೃದ್ಧಿ ಹಕ್ಕುಗಳಿಗೆ ಅವಕಾಶ ನೀಡುವ ಸಂವಾದಿ ಭಾಗದ ಮಾರುಕಟ್ಟೆ ಮೌಲ್ಯಕ್ಕೆ ಸಮನಾದ ವರ್ಗಾವಣೀಯ ಅಭಿವೃದ್ಧಿ ಹಕ್ಕುಗಳ ಮಾರುಕಟ್ಟೆ ಮೌಲ್ಯ ಅಥವಾ ಅಂಥ ಹಸ್ತಾಂತರಣದ ಪ್ರತಿಫಲ, ಇದರಲ್ಲಿ ಯಾವುದು ಹೆಚ್ಚೋ, ಅದರ ಮೇಲೆ 1%."

(5) 30ನೇ ಅನುಚ್ಛೇದದಲ್ಲಿ, (1)ನೇ ಉಪಖಂಡದಲ್ಲಿ, (i), (ii), (iii) ಮತ್ತು (iv) ನೇ ಬಾಬುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ನಮೂದುಗಳಿಗೆ, ಪರಂತುಕಗಳು ಮತ್ತು ವಿವರಣೆಯನ್ನು ಹೊರತುಪಡಿಸಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(i) ವಸತಿ ಸ್ವತ್ತಿನ ಸಂದರ್ಭದಲ್ಲಿ ಬಾಡಿಗೆಯು ಒಂದು ವರ್ಷವನ್ನು ಮೀರದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ, ಗರಿಷ್ಠ ಐದುನೂರು ರೂಪಾಯಿಗಳಿಗೆ ಒಳಪಟ್ಟು ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐವತ್ತು ಪೈಸೆ
(ii) ವಾಣಿಜ್ಯ ಅಥವಾ ಕೈಗಾರಿಕೆ ಸ್ವತ್ತಿನ ಸಂದರ್ಭದಲ್ಲಿ ಬಾಡಿಗೆಯು ಒಂದು ವರ್ಷವನ್ನು ಮೀರದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐವತ್ತು ಪೈಸೆ
(iii) ಒಂದು ವರ್ಷಕ್ಕೆ ಮೇಲ್ಪಟ್ಟು ಆದರೆ 10 ವರ್ಷಗಳನ್ನು ಮೀರದ ಅವಧಿಗೆ ಬಾಡಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ
(iv) ಹತ್ತು ವರ್ಷಗಳಿಗೆ ಮೇಲ್ಪಟ್ಟು ಆದರೆ ಇಪ್ಪತ್ತು ವರ್ಷಗಳಿಗೆ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು

ಮೀರದ ಅವಧಿಗೆ ಬಾಡಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ	ಮುರಿಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಎರಡು ರೂಪಾಯಿ
(v) ಇಪ್ಪತ್ತು ವರ್ಷಗಳಿಗೆ ಮೇಲ್ಪಟ್ಟು ಆದರೆ ಮೂವತ್ತು ವರ್ಷಗಳಿಗೆ ಮೀರದ ಅವಧಿಗೆ ಬಾಡಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಮೂರು ರೂಪಾಯಿ
(vi) ಮೂವತ್ತು ವರ್ಷಗಳಿಗೆ ಮೇಲ್ಪಟ್ಟು ಬಾಡಿಗೆಯೆಂದು ಅಥವಾ ಖಾಯಂ ಬಾಡಿಗೆಯೆಂದು ತಾತ್ಪರ್ಯವಾಗುವಲ್ಲಿ ಅಥವಾ ಯಾವುದೇ ನಿಶ್ಚಿತ ಅವಧಿಯ ಬಾಡಿಗೆಯೆಂದು ತಾತ್ಪರ್ಯವಾಗದಿರುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ 20(1)ನೇ ಅನುಚ್ಛೇದದ ಅಡಿಯಲ್ಲಿ ಹಸ್ತಾಂತರಕ್ಕಾಗಿ ವಿಧಿಸುವಷ್ಟೇ ಸುಂಕ; ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ವಿಧಿಸುವ ಸುಂಕ ಇವುಗಳಲ್ಲಿ ಯಾವುದು ಹೆಚ್ಚೋ ಅಷ್ಟು.”

(6) 32ಎ ಅನುಚ್ಛೇದಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

“32–ಎ ಸ್ಥಿರ ಅಥವಾ ಚರ ಸ್ವತ್ತಿನ ಲೈಸೆನ್ಸು.– ಎಂದರೆ, ಮಾಲೀಕನು ಅಥವಾ ಪ್ರಾಧಿಕಾರವು ಬಾಡಿಗೆಗಾಗಿ ಅಥವಾ ಪೀಜಿಗಾಗಿ ಅಥವಾ

ಯಾವುವದೇ ಹೆಸರಿನಿಂದ ಕರೆಯಲಾಗುವ ಮುಂಗಡ ಹಣ ಅಥವಾ ಭದ್ರತಾ ಠೇವಣಿಯ ಮೂಲಕ ನೀಡಿದ ಲೈಸೆನ್ಸು,–

"(i) ವಸತಿ ಉದ್ದೇಶಕ್ಕಾಗಿ ಒಂದು ವರ್ಷವನ್ನು ಮೀರದ ಅವಧಿಗೆ ಲೈಸೆನ್ಸ್ ಇದೆ ಎಂದು ತಾತ್ಪರ್ಯ ವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಐವತ್ತು ಪೈಸೆ, ಗರಿಷ್ಠ ಐದು ನೂರು ರೂಪಾಯಿಗಳು
(ii) ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶಕ್ಕಾಗಿ ಒಂದು ವರ್ಷವನ್ನು ಮೀರದ ಅವಧಿಗಾಗಿ ಲೈಸೆನ್ಸ್ ಇದೆ ಎಂದು ತಾತ್ಪರ್ಯವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐವತ್ತು ಪೈಸೆ
(iii) ಒಂದು ವರ್ಷವನ್ನು ಮೀರುವ ಆದರೆ ಹತ್ತು ವರ್ಷಗಳನ್ನು ಮೀರದ ಅವಧಿಗಾಗಿ ಲೈಸೆನ್ಸ್ ಇದೆ ಎಂದು ತಾತ್ಪರ್ಯ ವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ
(iv) ಹತ್ತು ವರ್ಷವನ್ನು ಮೀರುವ ಆದರೆ ಇಪ್ಪತ್ತು ವರ್ಷಗಳನ್ನು ಮೀರದ ಅವಧಿಗಾಗಿ ಲೈಸೆನ್ಸ್ ಇದೆ ಎಂದು ತಾತ್ಪರ್ಯವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ - ಪ್ರತಿ ಒಂದು ನೂರು

	ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಎರಡು ರೂಪಾಯಿ
(v) ಇಪ್ಪತ್ತು ವರ್ಷವನ್ನು ಮೀರುವ ಆದರೆ ಮೂವತ್ತು ವರ್ಷಗಳನ್ನು ಮೀರದ ಅವಧಿಗಾಗಿ ಲೈಸೆನ್ಸ್ ಇದೆ ಎಂದು ತಾತ್ಪರ್ಯವಾಗುವಲ್ಲಿ	ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಮೂರು ರೂಪಾಯಿಗಳು.”

(7) 37ನೇ ಅನುಚ್ಛೇದ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

“37. ವ್ಯವಹಾರಗಳ (ವಿದ್ಯುನ್ಮಾನ ಅಥವಾ ಇತರ ರೀತಿಯ) ಟಿಪ್ಪಣಿ ಅಥವಾ ಜ್ಞಾಪನ ಪತ್ರ– ದಬ್ಬಾಳಿ ಅಥವಾ ಏಜೆಂಟನು ಯಜಮಾನನಿಗಾಗಿ ಖರೀದಿ ಅಥವಾ ಮಾರಾಟವನ್ನು ಸೂಚಿಸಿ ಯಜಮಾನನಿಗೆ ಕಳುಹಿಸಿದ್ದು ಅಥವಾ ಕರ್ನಾಟಕ ರಾಜ್ಯದಲ್ಲಿ ಅಥವಾ ಬೇರೆಡೆ ನಿವಾಸಿಯಾಗಿರುವ ಕಕ್ಷಿದಾರ (ಯಜಮಾನನ) ಪರವಾಗಿ ಸ್ಟಾಕ್ ಎಕ್ಸ್‌ಚೇಂಜ್ ಅಥವಾ ಸಂಘ ಸಂಸ್ಥೆ ಮೂಲಕ ಅಥವಾ ಅನ್ಯಥಾ, ವ್ಯಾಪಾರಿ ಸದಸ್ಯರು (ಏಜೆಂಟ್) ಮಾಡಿದ ವ್ಯವಹಾರ.	
(ಎ) ಯಾವುದೇ ಸರಕುಗಳ ಅಥವಾ ವ್ಯಾಪಾರ ಸರಕುಗಳು	ಸರಕುಗಳ ಅಥವಾ ವ್ಯಾಪಾರ ಸರಕುಗಳ ಮೌಲ್ಯದ ಮೇಲೆ ಪ್ರತಿ ಹತ್ತು ಸಾವಿರ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಗರಿಷ್ಠ

	ಐವತ್ತು ರೂಪಾಯಿಗಳಿಗೊಳಪಟ್ಟು ಒಂದು ರೂಪಾಯಿ
(ಬಿ) ಯಾವುದೇ ಷೇರು, ಷೇರು ಪ್ರಮಾಣ ಪತ್ರ, ಸ್ಟಾಕ್ ಬಂಧಪತ್ರ, ಡಿಬೆಂಚರ್, ಡಿಬೆಂಚರ್ ಸ್ಟಾಕ್ ಅಥವ ಸರ್ಕಾರಿ ಭದ್ರತಾ ಪತ್ರವಾಗಿಲ್ಲದ ಇಂಥದೇ ಸ್ವರೂಪದ ಮಾರಾಟ ಮಾಡಬಹುದಾದ ಇತರ ಭದ್ರತಾ ಪತ್ರಗಳು	ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಅಂಥ ಭದ್ರತಾ ಪತ್ರಗಳ ಮೌಲ್ಯದ ಮೇಲೆ, ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ
(ಸಿ) ಸರ್ಕಾರಿ ಭದ್ರತಾ ಪತ್ರಗಳು	ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಆ ಭದ್ರತಾ ಪತ್ರಗಳ ಮೌಲ್ಯದ ಮೇಲೆ ಗರಿಷ್ಠ ಒಂದು ಸಾವಿರ ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ
(ಡಿ) ವಶಾವಣೆ ಅಥವಾ ವಶಾವಣೇತರ ಆಧಾರಿತ (ವೃತ್ತಿಯ ಮತ್ತು ವ್ಯಾಪಾರದ) ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಮೇಲ್ಕಂಡ (ಬಿ) ಖಂಡದ ಅಡಿಯಲ್ಲಿ ಬರುವಂಥವುಗಳನ್ನು ಹೊರತು ಪಡಿಸಿದ ಭದ್ರತಾ ಪತ್ರಗಳು	ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ
(ಇ) ಮೇಲ್ಕಂಡ (ಬಿ) ಖಂಡದ ಅಡಿಯಲ್ಲಿ ಬರುವಂತವುಗಳನ್ನು ಹೊರತುಪಡಿಸಿ ಭವಿಷ್ಯತ್ ಭದ್ರತಾ ಪತ್ರಗಳು ಭಾವೀ ಮತ್ತು ಐಚ್ಛಿಕ —	ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕಾಗಿ ಒಂದು ರೂಪಾಯಿ

ವ್ಯಾಪಾರ	
(ಎಫ್) ವ್ಯಾಪಾರ ಸರಕುಗಳ ವಾಯಿದಾ ಕರಾರುಗಳ ಬಗ್ಗೆ	ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕಾಗಿ ಒಂದು ರೂಪಾಯಿ
ವಿವರಣೆ.– (ಬಿ), (ಡಿ) ಮತ್ತು (ಇ) ಖಂಡಗಳ ಉದ್ದೇಶಗಳಿಗಾಗಿ "ಭದ್ರತಾ ಪತ್ರಗಳು" ಎಂದರೆ, ಭದ್ರತಾ ಪತ್ರಗಳ ಕರಾರು (ವಿನಿಯಮ) ಅಧಿನಿಯಮ, 1956ರ (2)ನೇ ಪ್ರಕರಣದ (ಎಚ್) ಖಂಡದಲ್ಲಿ ಪರಿಭಾಷಿಸಲಾದ ಭದ್ರತಾ ಪತ್ರಗಳು	
ವಿನಾಯಿತಿಗಳು.– (1) ಅಂಥ ಯಜಮಾನನಿಗಾಗಿ ಖರೀದಿ ಮಾಡಿರುವುದನ್ನು ಅಥವಾ ಮಾರಾಟ ಮಾಡಿರುವುದನ್ನು ತಿಳಿಸಿ ತನ್ನ ಯಜಮಾನಿಗಾಗಿ ದಳ್ಳಾಳಿಯು ಅಥವಾ ಏಜೆಂಟನು ಕಳುಹಿಸಿದ ಟಿಪ್ಪಣಿ ಅಥವಾ ಜ್ಞಾಪನ ಪತ್ರ ಅಥವಾ ಸರ್ಕಾರಿ ಭದ್ರತಾ ಪತ್ರ ಅಥವಾ ಯಾವುದೇ ನಿಗಮಿತ ಕಂಪನಿಯಲ್ಲಿ ಅಥವಾ ಇತರ ನಿಗಮಿತ ನಿಕಾಯದಲ್ಲಿ ಅಥವಾ ಅದರ ಷೇರು, ಷೇರು ಪ್ರಮಾಣ ಪತ್ರ, ಸ್ಟಾಕು, ಬಂಧ ಪತ್ರ, ಡಿಬೆಂಚರ್, ಡಿಬೆಂಚರ್ ಸ್ಟಾಕು ಅಥವಾ ಅದೇ ಸ್ವರೂಪದ	

ಮಾರಾಟ ಮಾಡಬಹುದಾದ ಇತರ ಭದ್ರತಾ ಪತ್ರಗಳು–ಇವುಗಳಿಗೆ ಸಂಬಂಧಪಟ್ಟಂತೆ 18ಎ ಅನುಚ್ಛೇದದ (1), (2) ಮತ್ತು (3)ನೇ ಖಂಡಗಳಲ್ಲಿ ವಿವರಿಸಿದ ತೀರುವಳಿ ಪಟ್ಟಿಗಳಲ್ಲಿ ಮಾಡಬೇಕಾದ ನಮೂದು. (2) ಲಿಖಿತ ಪತ್ರದಲ್ಲಿ ಹೇಳಿರುವ ಮೊಬಲಗು ಒಂದು ನೂರು ರೂಪಾಯಿಗಳಿಗಿಂತ ಕಡಿಮೆ ಇರುವಲ್ಲಿ, ಮೇಲ್ಕಂಡ ಯಾವುದೇ ಪ್ರಕರಣದಲ್ಲಿ ದಳ್ಳಾಳಿಯು ಅಥವಾ ಏಜೆಂಟನು ತನ್ನ ಯಜಮಾನನಿಗೆ ಕಳುಹಿಸಿದ ಟಿಪ್ಪಣಿ ಅಥವಾ ಜ್ಞಾಪನ ಪತ್ರ.	

(8) 41ನೇ ಅನುಚ್ಛೇದದಲ್ಲಿ,–

(ಎ) (ಇ) ಖಂಡದಲ್ಲಿ 3ನೇ ಅಂಕಣದಲ್ಲಿ, ಈ ಮುಂದಿನ ಪರಂತುಕವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:–

"ಪರಂತು, ಅಂಥ ಮುಖ್ತ್ಯಾರನಾಮೆಯ ಮೇಲೆ ಸಂದಾಯ ಮಾಡಲಾದ ಸುಂಕವನ್ನು, ಅದೇ ಪಕ್ಷಕಾರರ ನಡುವೆ ಮತ್ತು ಅದೇ ಸ್ವತ್ತಿಗೆ ಸಂಬಂಧಪಟ್ಟಂತೆ ತರುವಾಯದಲ್ಲಿ ಬರೆದುಕೊಟ್ಟ ಮಾರಾಟದ ಅಥವಾ ವರ್ಗಾವಣೆಯ ಲಿಖಿತ ಪತ್ರದ ಮೇಲೆ ಸಂದಾಯ ಮಾಡಬೇಕಾದ ಸುಂಕದ ಸಂಬಂಧದಲ್ಲಿ ಹೊಂದಾಣಿಕೆ ಮಾಡತಕ್ಕದ್ದಾಗಿರುತ್ತದೆ."

(ಬಿ) (ಇಎ) ಖಂಡದಲ್ಲಿ, ಮೂರನೇ ಅಂಕಣದಲ್ಲಿನ ನಮೂದುಗಳಿಗೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಅಂಥ ಮುಖ್ತ್ಯಾರನಾಮೆಯ ವಸ್ತು ವಿಷಯವಾಗಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಅಂಥ ಮುಖ್ತಾರನಾಮೆಯ ಪ್ರತಿಫಲ –

ಇವೆರಡರಲ್ಲಿ ಯಾವುದು ಹೆಚ್ಚೋ ಅದರ ಮೇಲೆ, ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ ಗರಿಷ್ಠಕ್ಕೊಳಪಟ್ಟು, ಪ್ರತಿ ನೂರು ರೂಪಾಯಿ ಅಥವಾ ಅದರ ಭಾಗಕ್ಕಾಗಿ ಒಂದು ರೂಪಾಯಿ:

ಪರಂತು, ಅಂಥ ಒಪ್ಪಂದ ಅಥವಾ ಅದರ ದಾಖಲೆಗಳ ಮೇಲೆ ಅಥವಾ ಅದೇ ಪಕ್ಷಕಾರರ ನಡುವೆ ಮತ್ತು ಅದೇ ಸ್ವತ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟ ಒಪ್ಪಂದದ ಜ್ಞಾಪನ ಪತ್ರದ ಮೇಲೆ 5(ಎಫ್) ಅನುಚ್ಛೇದದ ಮೇರೆಗೆ ಸೂಕ್ತ ಸ್ಟಾಂಪು ಸುಂಕವನ್ನು ಸಂದಾಯ ಮಾಡಿರುವಾಗ, ಅಂಥ ಮುಖ್ತ್ಯಾರನಾಮೆಯ ಮೇಲೆ ವಿಧಿಸಬಹುದಾದ ಸುಂಕವು 200/– ರೂಪಾಯಿಗಳನ್ನು ಮೀರತಕ್ಕದ್ದಲ್ಲ.

ಅಲ್ಲದೆ ಪರಂತು, ಅಂಥ ಮುಕ್ತ್ಯಾರನಾಮೆಯ ಮೇಲೆ ಸಂದಾಯ ಮಾಡಿದ ಸುಂಕವನ್ನು ಅದೇ ಪಕ್ಷಕಾರರ ನಡುವೆ ಮತ್ತು ಅದೇ ಸ್ವತ್ತಿನ ಸಂಬಂಧದಲ್ಲಿ ತರುವಾಯದಲ್ಲಿ ಬರೆದುಕೊಟ್ಟ ಮಾರಾಟ ಅಥವಾ ವರ್ಗಾವಣೀಯ ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸುಂಕಕ್ಕೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದಾಗಿರುತ್ತದೆ."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾಡಲಾಗಿರುವ ಪ್ರಸ್ತಾವಗಳನ್ನು ಜಾರಿಗೊಳಿಸಲು ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 34) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಕೆಲವು ಅನುಷಂಗಿಕವಾದ ತಿದ್ದುಪಡಿಗಳನ್ನು ಮಾಡಲು ಸಹ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಜಿ. ಕರುಣಾಕರ ರೆಡ್ಡಿ
ಕಂದಾಯ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ

xx xx xx

9. ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿಮಾಡಿಕೊಳ್ಳಲು ಅಧಿಕಾರ:– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ನಿಯಮ ಅಥವಾ ಆದೇಶದ ಮೂಲಕ,–

(ಎ) xx xx xx

ಪರಂತು ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ,–

(i) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆಗಳ ಸಂಕೀರ್ಣ ಉಪಬಂಧಗಳ ಅಧಿನಿಯಮ, 1974ರಲ್ಲಿ (1975ರ ಅಧಿನಿಯಮ 2) ಪರಿಭಾಷಿಸಲಾದಂತೆ, ಯಾರೇ ವ್ಯಕ್ತಿಯು ಕೃಷಿ ಉದ್ದೇಶಕ್ಕಾಗಿ; ಮತ್ತು

(ii) ಸಾರ್ವಜನಿಕ ವಲಯ ಉದ್ಯಮವು ಅದು ಸ್ಥಾಪಿತವಾದ ಉದ್ದೇಶಕ್ಕಾಗಿ ಸಾಲ ಪಡೆಯಲು ಬರೆದುಕೊಡಲಾದ ಲಿಖಿತ ಪತ್ರದ ಮೇಲೆ ಸಂದಾಯ ಮಾಡತಕ್ಕ ಸಂಪೂರ್ಣ ಸ್ಟಾಂಪ್ ಶುಲ್ಕವನ್ನು ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು".

xx xx xx

ಮತ್ತೂ ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡಲ್ಲೂ ಇಂದಿರಾ ಆವಾಸ ಯೋಜನೆಯನ್ನು ಹೊರತುಪಡಿಸಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮತ್ತು ವಿಶೇಷ ಔದ್ಯೋಗಿಕ ವರ್ಗಗಳಿಗೆ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧದಲ್ಲಿ, ರಾಜ್ಯ ಸರ್ಕಾರದ ಬಂಡವಾಳ ಹೂಡಿಕೆಯ ಮೂಲಕ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ನಿಗಮದಿಂದ ಸಾಲ ಪಡೆಯುವ ಮೂಲಕ ವಸತಿ ಸೌಕರ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ರಾಜೀವ್‌ಗಾಂಧಿ ಗೃಹ ನಿರ್ಮಾಣ ನಿಗಮವು ಅಥವಾ ನಿಗಮದ ಪರವಾಗಿ ಬರೆದುಕೊಟ್ಟ ಯಾವುದೇ ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸ್ಟಾಂಪು ಸುಂಕವನ್ನು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಲಾಗುವಷ್ಟಕ್ಕೆ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು.

xx xx xx

(ಬಿ) ಯಾವುದೇ ನಿಗಮಿತ ಕಂಪನಿ ಅಥವಾ ಇತರ ನಿಗಮಿತ ನಿಕಾಯವು ಹೊರಡಿಸಿದ ಬಂಧಪತ್ರಗಳು ಅಥವಾ ಇತರ ಮಾರಾಟ ಮಾಡಬಹುದಾದ ಭದ್ರತಾ ಪತ್ರಗಳ ಸಂದರ್ಭದಲ್ಲಿ, ಸುಂಕಗಳ ಬಗ್ಗೆ ರಾಜಿ ಮಾಡಿಕೊಳ್ಳಲು ಅಥವಾ ಕ್ರೋಢೀಕರಣಕ್ಕಾಗಿ ವ್ಯವಸ್ಥೆ ಮಾಡಬಹುದು.

(1ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ ಸ್ಟಾಂಪ್ ಶುಲ್ಕವನ್ನು ಕಡಿಮೆ ಮಾಡುವುದನ್ನು ಅಥವಾ ಮಾಫಿ ಮಾಡುವುದನ್ನು, (1)ನೇ ಉಪ–ಪ್ರಕರಣಕ್ಕೆ ಅನುಸಾರವಾಗಿ ಅಧಿಸೂಚಿಸಿದ ಹೊರತು ಅನುಮತಿಸತಕ್ಕದ್ದಲ್ಲ.

xx xx xx

(2) (1)ನೇ ಉಪಕರಣದ (ಎ) ಖಂಡದ ಮೇರೆಗೆ ಪ್ರಕಟಿಸಿದ ಪ್ರತಿಯೊಂದು ನಿಯಮ ಅಥವಾ ಆದೇಶವನ್ನು ಅದನ್ನು ಪ್ರಕಟಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಆದೇಶವು ಸಂದರ್ಭಾನುಸಾರ, ಹಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

xx xx xx

45ಎ. ಕಡಿಮೆ ಮೌಲ್ಯದ ಹಸ್ತಾಂತರಣದ ಲಿಖಿತ, ಇತ್ಯಾದಿಗಳೊಂದಿಗೆ ವ್ಯವಹರಿಸುವ ಬಗ್ಗೆ:– (1)

xx xx xx

"(ಎಚ್) 30ನೇ ಅನುಚ್ಛೇದದ (ರತ) ನೇ ಬಾಬಿನಡಿಯಲ್ಲಿ ಒಳಗೊಂಡ ಒಂದು ಗುತ್ತಿಗೆ;"

xx xx xx

ಅನುಸೂಚಿ

5. xx	xx	xx
2(ಇ)ಸ್ಥಿರ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿರುವಲ್ಲಿ ಕರಾರನ್ನು ಭಾಗಶಃವಾಗಿ ನಿರ್ವಹಿಸಿರುವಲ್ಲಿ		
(i)	ಹಸ್ತಾಂತರವನ್ನು ಲಿಖಿತದಲ್ಲಿ ಕೊಡದೆ ಸ್ವತ್ತಿನ ಸ್ವಾಧೀನತೆಯನ್ನು ನೀಡಿದ್ದರೆ ಅಥವಾ ನೀಡಲಾಗುವುದೆಂದು ಒಪ್ಪಿಕೊಂಡಿದ್ದಾರೆ;	ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಣಕ್ಕೆ (ಸಂಖ್ಯೆ 20) ವಿಧಿಸಬಹುದಾದ ಅದೇ ಸುಂಕ.
(ii)	ಸ್ವತ್ತಿನ – ಸ್ವಾಧೀನತೆಯನ್ನು ನೀಡದಿರುವಲ್ಲಿ	
(ಎ)	ಸ್ವತ್ತಿನ ಮೌಲ್ಯವು	
(i)	5000 ರೂಪಾಯಿಗಳು ಮೀರದಿರುವಲ್ಲಿ	ಹತ್ತು ರೂಪಾಯಿಗಳು
(ii)	5000–00 ರೂ.ಗಳನ್ನು ಮೀರಿದ್ದರೆ ಆದರೆ 20,000–00 ರೂಪಾಯಿಗಳನ್ನು ಮೀರದಿರುವಲ್ಲಿ	ಇಪ್ಪತ್ತು ರೂಪಾಯಿಗಳು
(iii)	20,000–00 ರೂ.ಗಳನ್ನು ಮೀರಿದ್ದರೆ ಆದರೆ 50,000–00 ರೂಪಾಯಿಗಳನ್ನು ಮೀರದಿರುವಲ್ಲಿ	ಒಂದು ನೂರು ರೂಪಾಯಿಗಳು
(iv)	50,000–00 ರೂ.ಗಳು ಮೀರಿದರೆ	ಇನ್ನೂರು ರೂಪಾಯಿಗಳು

ವಿವರಣೆ.– ಅಂಥ ಒಪ್ಪಂದದ ವಸ್ತು ವಿಷಯವಾಗಿರುವ ಸ್ವತ್ತಿನ ಸಂಬಂಧದಲ್ಲಿ ಮಾರಾಟಗಾರನು ಖರೀದಿದಾರನಿಗೆ ಪ್ರತ್ಯೇಕವಾಗಿ ನೀಡಿದ ಮುಖ್ತಾರನಾಮೆಯ ಉಲ್ಲೇಖವನ್ನು ಆ ಒಪ್ಪಂದದಲ್ಲಿ ಮಾಡಿದ್ದರೆ ಈ ಖಂಡದ ಉದ್ದೇಶಕ್ಕಾಗಿ ಸ್ವತ್ತಿನ ಸ್ವಾಧೀನತೆಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು.

xx xx xx

(ಬಿ) xx xx xx

ವಿವರಣೆ–1:

(1) "ಗುತ್ತಿಗೆದಾರ" ಎಂಬ ಪದವು ಮೂವತ್ತು ವರ್ಷಗಳಿಗೆ ಮೀರಿದ ಅಥವಾ ಇನ್ನೂ ಹೆಚ್ಚಿನ ಅವಧಿಗೆ ಅಥವಾ ಶಾಶ್ವತವಾಗಿ ಅಥವಾ ಯಾವುದೇ ನಿರ್ದಿಷ್ಟ ಅವಧಿಗಲ್ಲವೆಂದು ತಾತ್ಪರ್ಯವಾಗುವ ಗುತ್ತಿಗೆಯನ್ನು ಹೊಂದಿರುವವನು ಎಂಬ ಅರ್ಥವನ್ನು ಹೊಂದಿರತಕ್ಕದ್ದು.

(2) "ಕಟ್ಟಡ" ಎಂಬ ಪದವು ಒಂದಕ್ಕಿಂತ ಹೆಚ್ಚು ಅಪಾರ್ಟ್‌ಮೆಂಟ್/ಫ್ಲಾಟ್/ಕಚೇರಿ ಸ್ಥಳಾವಕಾಶ ಅಥವಾ ಬಹುಮಹಡಿ ಕಟ್ಟಡದ ಭಾಗವನ್ನು ಹೊಂದಿರುವ ಒಂದು ಕಟ್ಟಡ ಎಂಬ ಅರ್ಥವನ್ನು ಹೊಂದಿರತಕ್ಕದ್ದು.

ವಿವರಣೆ II:- (ಇ) ಖಂಡದ (i) ನೇ ಉಪಖಂಡದ ಮತ್ತು (ಹೆಚ್) ಖಂಡಗಳ ಉದ್ದೇಶಕ್ಕಾಗಿ, ನಂತರದ ಹಸ್ತಾಂತರಣ ಅಥವಾ ಸಂದರ್ಭಾನುಸಾರ ಅಡಮಾನವನ್ನು ಅಂಥ ಒಪ್ಪಂದ ಅಥವಾ ಅದರ ದಾಖಲೆಗಳು ಅಥವಾ ಜ್ಞಾಪನಪತ್ರದ ಅನುಸರಣೆಯಲ್ಲಿ ಬರೆದುಕೊಟ್ಟಿರುವಲ್ಲಿ ಅಂಥ ಒಪ್ಪಂದ ಅಥವಾ ಅದರ ದಾಖಲೆಗಳು ಅಥವಾ ಜ್ಞಾಪನಪತ್ರದ ಅನುಸರಣೆಯಲ್ಲಿ ಬರೆದುಕೊಟ್ಟಿರುವಲ್ಲಿ ಅಂಥ ಒಪ್ಪಂದ ಅಥವಾ ಅದರ ದಾಖಲೆಗಳು ಅಥವಾ ಜ್ಞಾಪನದ ಮೇಲೆ ಸ್ಟಾಂಪು ಶುಲ್ಕ ಏನಾದರೂ ಇದ್ದಲ್ಲಿ ಅದನ್ನು ಈಗಾಗಲೇ ಸಂದಾಯ ಮಾಡಿದ್ದರೆ ಮತ್ತು ವಸೂಲು ಮಾಡಲಾಗಿದ್ದರೆ ಅದನ್ನು ಹಸ್ತಾಂತರ ಅಥವಾ ಸಂದರ್ಭಾನುಸಾರ ಅಡಮಾನದ ಮೇಲೆ ವಿಧಿಸಬಹುದಾದ ಒಟ್ಟು ಸುಂಕಕ್ಕೆ ಹೊಂದಿಕೆ ಮಾಡತಕ್ಕದ್ದು.

"5 (ಎಫ್) ಬಹುಘಟಕ ಮನೆ ಅಥವಾ ಕಟ್ಟಡ ಅಥವಾ ಅಪಾರ್ಟ್‌ಮೆಂಟ್‌ನ ಘಟಕ/ಫ್ಲಾಟ್/ ಬಹುಮಹಡಿ ಕಟ್ಟಡದ ಒಂದು ಭಾಗ ಇವು ಒಳಗೊಂಡಂತೆ ಸ್ಥಿರ ಆಸ್ತಿಯ ನಿರ್ಮಾಣ/ಅಭಿವೃದ್ಧಿ/ ಮಾರಾಟಕ್ಕೆ ಸಂಬಂಧಿಸಿದಂತೆ, ನಿರ್ಮಾಣ/ ಅಭಿವೃದ್ಧಿಯ ತರುವಾಯ ಅಂಥ ಆಸ್ತಿಯನ್ನು ಆ ವ್ಯಕ್ತಿ ಮತ್ತು ಸಂದರ್ಭಾನುಸಾರ ಮಾಲೀಕ ಅಥವಾ ಗುತ್ತಿಗೆದಾರ ಜಂಟಿಯಾಗಿ ಅಥವಾ ಬೇರೆಬೇರೆಯಾಗಿ ಹೊಂದಿರತಕ್ಕದ್ದು ಎಂದು ಅಥವಾ ಅಂಥ ಆಸ್ತಿಯನ್ನು ಅವರು ಜಂಟಿಯಾಗಿ ಅಥವಾ ಬೇರೆಬೇರೆ ಯಾಗಿ ಮಾರತಕ್ಕದ್ದು ಅಥವಾ ಅದರ ಒಂದು ಭಾಗವನ್ನು ಜಂಟಿ ಯಾಗಿ ಅಥವಾ ಬೇರೆಬೇರೆಯಾಗಿ ಹೊಂದಿರತಕ್ಕದ್ದು ಮತ್ತು ಅದರ ಉಳಿದ ಭಾಗವನ್ನು ಜಂಟಿಯಾಗಿ ಅಥವಾ ಬೇರೆಬೇರೆಯಾಗಿ ಮಾರಾಟ ಮಾಡತಕ್ಕದ್ದು ಎಂಬ ಷರತ್ತನ್ನು ಒಪ್ಪಂದದಲ್ಲಿ ಹೊಂದಿರುವ ಒಬ್ಬ ವ್ಯಕ್ತಿ.	(ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ 28ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಆದ ಒಪ್ಪಂದದಡಿಯಲ್ಲಿನ ಅಂಥಾ ವರ್ಗಾವಣೆಯ ವಸ್ತು ವಿಷಯವಾಗಿರುವ); ಆಸ್ತಿಯ ನಿರ್ಮಾಣದ ಅಥವಾ ಪ್ರಸ್ತಾವಿತ ನಿರ್ಮಾಣದ ಸಂದರ್ಭಾನುಸಾರ ಅಭಿವೃದ್ಧಿ ಅಥವಾ ಪ್ರಸ್ತಾವಿತ ಅಭಿವೃದ್ಧಿಯ ಅಂದಾಜು ಬೆಲೆ ಅಥವಾ ಅಂಥ ವರ್ಗಾವಣೆಯ ಪ್ರತಿಫಲಧನ– ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಪ್ರತಿಯೊಂದು ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ: ಪರಂತು ಅದೇ ಆಸ್ತಿಯ ಸಂಬಂಧದಲ್ಲಿ ಅದೇ ಪಕ್ಷಕಾರರ ನಡುವೆ ಮಾಡಿಕೊಂಡ ಮುಖ್ತ್ಯಾರುನಾಮೆಯ ಮೇಲೆ 41ನೇ ಅನುಚ್ಛೇದದ (ಇ), (ಇಎ) ಮತ್ತು (ಇಬಿ) ಖಂಡದಲ್ಲಿ ಯುಕ್ತವಾದ ಸ್ಟ್ಯಾಂಪು ಶುಲ್ಕವನ್ನು ಸಂದಾಯ ಮಾಡಿದ್ದಲ್ಲಿ ಆಗ ಈ ಅನುಚ್ಛೇದದ ಅಡಿಯಲ್ಲಿನ ಸ್ಟ್ಯಾಂಪು ಶುಲ್ಕವು 5ನೇ ಅನುಚ್ಛೇದದನ್ವಯ ಇರತಕ್ಕದ್ದು.

ವಿವರಣೆ–I: (1) "ಗುತ್ತಿಗೆದಾರ" ಎಂಬ ಪದವು ಮೂವತ್ತು ವರ್ಷಗಳಿಗೆ ಮೀರಿದ ಅಥವಾ ಇನ್ನೂ ಹೆಚ್ಚಿನ ಅವಧಿಗೆ ಅಥವಾ ಶಾಶ್ವತವಾಗಿ ಅಥವಾ ಯಾವುದೇ ನಿರ್ದಿಷ್ಟ ಅವಧಿಗಲ್ಲವೆಂದು ತಾತ್ಪರ್ಯವಾಗುವ ಗುತ್ತಿಗೆಯನ್ನು ಹೊಂದಿರುವವನು ಎಂಬ ಅರ್ಥವನ್ನು ಹೊಂದಿರತಕ್ಕದ್ದು. (2) "ಕಟ್ಟಡ" ಎಂಬ ಪದವು ಒಂದಕ್ಕಿಂತ ಹೆಚ್ಚು ಅಪಾರ್ಟ್‌ಮೆಂಟ್/ಫ್ಲಾಟ್/ಕಚೇರಿ ಸ್ಥಳಾವಕಾಶ ಅಥವಾ ಬಹುಮಹಡಿ ಕಟ್ಟಡದ ಭಾಗವನ್ನು ಹೊಂದಿರುವ ಒಂದು ಕಟ್ಟಡ ಎಂಬ ಅರ್ಥವನ್ನು ಹೊಂದಿರತಕ್ಕದ್ದು.	
ವಿವರಣೆ–II: (ಇ) ಖಂಡ, 9ಎಫ್) ಖಂಡ ಮತ್ತು (ಎಚ್) ಖಂಡದ ಉದ್ದೇಶಕ್ಕಾಗಿ ಅಂಥ ಒಪ್ಪಂದ ಅಥವಾ ಅದರ ದಾಖಲೆಗಳು ಅಥವ ಜ್ಞಾಪನಪತ್ರವನ್ನ ಅನುಸರಿಸಿ ತರುವಾಯದಲ್ಲಿ ಹಸ್ತಾಂತರಣ ಪತ್ರ ಅಥವಾ ಸಂದರ್ಭಾನುಸಾರ ಅಡಮಾನ ಪತ್ರವನ್ನು ಅದೇ ಪಕ್ಷಕಾರರು ತಮ್ಮ ನಡುವೆ ಬರೆದು ಕೊಟ್ಟಿರುವಲ್ಲ, ಒಪ್ಪಂದದ ಅಥವಾ ಅದರ ದಾಖಲೆಗಳ ಅಥವಾ ಜ್ಞಾಪನಪತ್ರದ ಮೇಲೆ ಈಗಾಗಲೇ ಸಂದಾಯ	

ಮಾಡಿದ ಅಥವಾ ವಸೂಲಿ ಮಾಡಿದ ಸ್ಟ್ಯಾಂಪು ಶುಲ್ಕವೇ ನಾದರೂ ಇದ್ದಲ್ಲಿ ಅದನ್ನು ಹಸ್ತಾಂತರಣ ಪತ್ರ ಅಥವಾ ಅಡಮಾನ ಪತ್ರದ ಮೇಲೆ ವಿಧಿಸತಕ್ಕ ಒಟ್ಟು ಶುಲ್ಕಕ್ಕೆ ಸರಿಹೊಂದಿಸತಕ್ಕದ್ದು.	

xx xx xx

6(1) xx xx xx

(ಎ) ಅಂಥ ಸಲ ಅಥವ ಋಣವನ್ನು ತಗಾದೆ ಮಾಡಿದಾಗ ಅಥವಾ ಒಪ್ಪಂದವನ್ನು ಸಾಕ್ಷೀಕರಿಸುವ ಲಿಖಿತದ ದಿನಾಂಕದಿಂದ ಮೂರು ತಿಂಗಳಾದ ಮೇಲೆ ಮರು ಸಂದಾಯವಾಗಬೇಕಾಗಿದ್ದರೆ,

xx xx xx

14. ಲಿಖಿತ ಪತ್ರದ ರದ್ದತಿ.– (ಎ) ಮೂಲ ಲಿಖಿತದ ಮೇಲೆ ಸ್ಟ್ಯಾಂಪು ಶುಲ್ಕವನ್ನು ಸಂದಾಯ ಮಾಡಿದ್ದು, ಈಗಾಗಲೇ ಕಾರ್ಯಾ ಚರಣೆಯಲ್ಲಿರುವ ಯಾವುದೇ ಲಿಖಿತ ರದ್ದತಿಯ ಮೇಲೆ (ಬಿ) xx xx	ಅದೇ ಶುಲ್ಕ

20(1) xx xx xx

ವಿವರಣೆ:

(6) ಸ್ಪೆಷಲ್ ಪರ್ಪಸ್ ವೆಹಿಕಲ್‌ಗೆ (ಎಸ್.ಪಿ.ವಿ.) ಅಥವಾ ಅವುಗಳನ್ನು ಯಾವುದೇ ಹೆಸರಿನಿಂದ ಕರೆಯಲಿ, ಭದ್ರತೆ ಒದಗಿಸುವ ಪ್ರಕ್ರಿಯೆಯ ಸಂಬಂಧದಲ್ಲಿ, ಮೂಲಕರ್ತನಿಂದ ಸ್ವೀಕರಿಸಬಹುದಾದುವುಗಳ ವಹಿಸಿಕೊಡುವಿಕೆಗೆ ಸಂಬಂಧಿಸಿದ್ದರೆ–	ಗರಿಷ್ಠ ಒಂದು ಲಕ್ಷ ರೂಪಾಯಿ ಗಳಿಗೆ ಒಳಪಟ್ಟು, ಪ್ರತಿ ಒಂದು ಸಾವಿರ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ.

xx xx xx

30. xx xx xx

ಗೇಣಿಯು, ಐದು ವರ್ಷಕ್ಕೆ ಕಡಿಮೆ ಯಿಲ್ಲದ ಆದರೆ ಹತ್ತು ವರ್ಷಗಳಿಗೆ ಮೀರದ ಅವಧಿಗಾಗಿ ಇದೆ ಎಂದು ತಾತ್ಪರ್ಯವಾಗುತ್ತಿದ್ದಲ್ಲಿ.	ಕಾಯ್ದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗಿನ ಅಥವಾ ಮೌಲ್ಯದ ಎರಡರಷ್ಟಕ್ಕೆ ಸಮಾನದ ಮೊತ್ತ ಅಥವಾ ಮೌಲ್ಯಕ್ಕಾಗಿ ಒಂದು ಹಸ್ತಾಂತರಣ ಪತ್ರದಂತೆ (ಅನುಚ್ಛೇದ ಸಂಖ್ಯೆ 20) ಅಷ್ಟೇ ಸುಂಕ.

xx xx xx

"32ಎ. ಸ್ಥಿರ ಮತ್ತು ಚರ ಸ್ವತ್ತುಗಳಿಗೆ ಲೈಸೆನ್ಸು.– ಅಂದರೆ ಬಾಡಿಗೆಗಾಗಿ ಅಥವಾ ಶುಲ್ಕಕ್ಕಾಗಿ ಅಥವಾ ಅದನ್ನು ಯಾವುದೇ ಹೆಸರಿನಿಂದ ಕರೆಯಲಿ ಅದಕ್ಕಾಗಿ ಮತ್ತು ಮುಂಗಡದ ಹಣ/ಭದ್ರತಾ ಠೇವಣಿಗಾಗಿ ಮಾಲೀಕನಿಂದ ಅಥವಾ ಪ್ರಾಧಿಕಾರದಿಂದ ಮಂಜೂರಾದ ಲೈಸೆನ್ಸು	
(ಎ) ಲೈಸೆನ್ಸು ಐದು ವರ್ಷಗಳ ಅವಧಿಗೆ ಮೀರತಕ್ಕದ್ದಲ್ಲ ಎಂದು ತಾತ್ಪರ್ಯವಾದರೆ	ಸರಾಸರಿ ವಾರ್ಷಿಕ ಬಾಡಿಗೆ ಅಥವಾ ಶುಲ್ಕ ಅಥವಾ ಯಾವುದೇ ಹೆಸರಿನಿಂದ ಅದನ್ನು ಕರೆಯಲಿ ಅದು ಮತ್ತು ಅಂಥ ಲೈಸೆನ್ಸಿನ ಅಡಿಯಲ್ಲಿ ಮುಂಗಡವಾಗಿ ಕೊಟ್ಟ ಹಣ/ಭದ್ರತೆ ಠೇವಣಿ–ಇವುಗಳ ಪ್ರತಿ ನೂರು ರೂಪಾಯಿಗಳಿಗೆ

	ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ.
(ಖ) ಲೈಸೆನ್ಸು ಐದು ವರ್ಷಗಳ ಅವಧಿಗೆ ಮೀರಿದ್ದು ಆದರೆ ಹತ್ತು ವರ್ಷಗಳನ್ನು ಮೀರತಕ್ಕದ್ದಲ್ಲ ಎಂದು ತಾತ್ಪರ್ಯವಾದರೆ	ಸರಾಸರಿ ವಾರ್ಷಿಕ ಬಾಡಿಗೆ ಅಥವಾ ಶುಲ್ಕ ಅಥವಾ ಯಾವುದೇ ಹೆಸರಿನಿಂದ ಕರೆಯಲಿ ಅದು ಮತ್ತು ಅಂಥ ಲೈಸೆನ್ಸಿನ ಅಡಿಯಲ್ಲಿ ಸಂದಾಯ ಮಾಡತಕ್ಕ ಅಥವಾ ಕೊಡತಕ್ಕ ಮುಂಗಡ ಹಣ/ಭದ್ರತಾ ಠೇವಣಿಯ ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗದ ಮೇಲೆ ಎರಡು ರೂಪಾಯಿಗಳು
(ಗ) ಲೈಸೆನ್ಸು ಹತ್ತುವರ್ಷಗಳ ಅವಧೀಗೆ ಮೀರಿದ್ದು ಆದರೆ ಮೂವತ್ತು ವರ್ಷಗಳನ್ನು ಮೀರತಕ್ಕದ್ದಲ್ಲ ಎಂದು ತಾತ್ಪರ್ಯವಾದರೆ	ಸರಸರಿ ವಾರ್ಷಿಕ ಬಾಡಿಗೆ ಅಥವಾ ಶುಲ್ಕ ಅಥವಾ ಯಾವುದೇ ಹೆಸರಿನಿಂದ ಕರೆಯಲಿ ಮತ್ತು ಅಂಥ ಲೈಸೆನ್ಸಿನ ಅಡಿಯಲ್ಲಿ ಸಂದಾಯ ಮಾಡತಕ್ಕ ಅಥವಾ ಕೊಡತಕ್ಕ ಮುಂಗಡ ಹಣ/ಭದ್ರತಾ ಠೇವಣಿಯ ಪ್ರತಿ ನೂರು ರೂಪಾಯಿಗಳಿಗೆ ನಾಲ್ಕು ರೂಪಾಯಿಗಳು.”

XX XX XX

37. ಟಿಪ್ಪಣಿ ಅಥವಾ ಜ್ಞಾಪನಾ ಪತ್ರ ಬ್ರೋಕರ್ ಅಥವಾ ಏಜೆಂಟನು ಯಜಮಾನನು ತನ್ನ ಪರವಾಗಿ ಈ ಕೆಳಗಿನವುಗಳ ಬಗ್ಗೆ ಮಾಡಿದ ಖರೀದಿ ಅಥವಾ ಮಾರಾಟದ ಬಗ್ಗೆ ಅಂಥ ಯಜಮಾನನಿಗೆ ಟಿಪ್ಪಣಿ ಅಥವಾ	

ಜ್ಞಾಪನ ಪತ್ರವನ್ನು ಕಳುಹಿಸಿದ್ದು,	ಪ್ರತಿ ಹತ್ತು ಸಾವಿರ ರೂಪಾಯಿ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ.
(ಎ) ಇಪ್ಪತ್ತು ರೂಪಾಯಿ ಮೌಲ್ಯವನ್ನು ಮೀರಿದ ಯಾವುದೇ ಸರಕುಗಳಿಗೆ	ಭದ್ರತೆಯನ್ನು ಖರೀದಿ ಅಥವಾ ಮಾರಾಟ ಮಾಡುವ ಸಮಯದಲ್ಲಿ ಸಂದರ್ಭಾನುಸಾರವಾಗಿ ಆ ಭದ್ರತೆಯ ಮೌಲ್ಯದ ಪ್ರತಿ ಹತ್ತು ಸಾವಿರ ರೂಪಾಯಿ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ.
(ಬಿ) ಇಪ್ಪತ್ತು ರೂಪಾಯಿ ಮೌಲ್ಯವನ್ನು ಮೀರಿದ; ಸರ್ಕಾರದ ಭದ್ರತೆಯಲ್ಲದ ಯಾವುದೇ ಷೇರು, ಷೇರು ಪ್ರಮಾಣ ಪತ್ರ, ಸಟಾಕ್, ಬಂಧಪತ್ರ, ಡಿಬೆಂಚರ್, ಡಿಬೆಂಚರ್ ಸ್ಟಾಕ್, ಅಥವಾ ಅದೇ ಸ್ವರೂಪದ ಇತರ ಮಾರಾಟ–ಖರೀದಿ ಭದ್ರತೆಗೆ.	
(ಸಿ) ಸರ್ಕಾರಿ ಭದ್ರತೆಗೆ	ಭದ್ರತೆಯನ್ನು ಖರೀದಿ ಅಥವಾ ಮಾರಾಟ ಮಾಡುವ ಸಮಯದಲ್ಲಿ ಸಂದರ್ಭಾನುಸಾರವಾಗಿ ಗರಿಷ್ಟ ಒಂದು ಸಾವಿರ ರೂಪಾಯಿಗೆ ಒಳಪಟ್ಟು ಭದ್ರತೆಯ ಮೌಲ್ಯದ ಪ್ರತಿ ಹತ್ತು ಸಾವಿರ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ.

ವಿನಾಯಿತಿಗಳು:–

(1) ಬ್ರೋಕರ್ ಅಥವಾ ಏಜೆಂಟನು ಅವನ ಯಜಮಾನನಿಗೆ ಕಳುಹಿಸಿದ, ಅಂಥ ಯಜಮಾನನ ಪರವಾಗಿ ಅಥವಾ ಸರ್ಕಾರದ ಭದ್ರತೆ ಅಥವಾ ಷೇರು, ಷೇರು ಪ್ರಮಾಣ ಪತ್ರ, ಸ್ಟಾಕ್, ಬಂಧಪತ್ರ, ಡಿಬೆಂಚರ್, ಡಿಬೆಂಚರ್ ಸ್ಟಾಕ್ ಅಥವಾ ಅಂಥದೇ ಸ್ವರೂಪದ ಮಾರಾಟ–ಖರೀದಿಯ ಇತರ ಭದ್ರತೆಯನ್ನು ಯಾವುದೇ ನಿಗಮಿತ ಕಂಪೆನಿ ಅಥವಾ ಇತರ ನಿಗಮಿತ ನಿಕಾಯದಲ್ಲಿ ಅಥವಾ ಅದರ ಪರವಾಗಿ ಮಾಡಲಾದ ಖರೀದಿ ಅಥವಾ ಮಾರಾಟವನ್ನು ತಿಳಿಸುವ ಟಿಪ್ಪಣಿ ಅಥವಾ ಜ್ಞಾಪನ

ಪತ್ರದಲ್ಲಿ ಅನುಚ್ಛೇದ 18ಎ ಯಲ್ಲಿನ ವರ್ಗ (1). (2) ಮತ್ತು (3)ರಲ್ಲಿ ವಿವರಿಸಲಾಗಿರುವ ತೀರುವಳಿ ಪಟ್ಟಿಯಲ್ಲಿ ಅಗತ್ಯಪಡಿಸಲಾದಂತೆ ಆ ಬಗ್ಗೆ ನಮೂದು ಮಾಡಬೇಕು.

(2) ಮೇಲ್ಕಂಡ ಯಾವುದೇ ಸಂದರ್ಭಗಳಲ್ಲಿ ಬ್ರೋಕರ್ ಅಥವಾ ಏಜೆಂಟನು ಅವನ ಯಜಮಾನನನಿಗೆ ಟಿಪ್ಪಣಿ ಅಥವಾ ಜ್ಞಾಪನ ಪತ್ರವನ್ನು ಕಳುಹಿಸಿದ್ದಲ್ಲಿ ಲಿಖಿತ ಪತ್ರದಲ್ಲಿ ಹೇಳಲಾಗಿರುವ ಮೊಬಲಗು ಒಂದು ನೂರು ರೂಪಾಯಿಗಿಂತ ಕಡಿಮೆ ಇರಬೇಕು.

41. xx xx (ಇ) ಪ್ರತಿಫಲಕ್ಕಾಗಿ ಮತ್ತು ಯಾವುದೇ ಸ್ಥಿರ ಸ್ವತ್ತನ್ನು ಮಾರಾಟ ಮಾಡಲು ಅಟಾರ್ನಿಯನ್ನು ಅಧಿಕೃತಗೊಳಿಸಿರುವಾಗ	ಪ್ರತಿಫಲದ ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿ ಹಸ್ತಾಂತರಣ ಅನುಚ್ಛೇದ ಸಂಖ್ಯೆ 20 (1) ಎಂಬಂತೆ ಅದೇ ಸುಂಕ

ಅನುಬಂಧ – V

ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದುಪಡಿ) ವಿಧೇಯಕ, 2010 (2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 12)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು **ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2010** ಎಂದು ಕರೆಯತಕ್ಕದ್ದು.

(2) ಇದು 2010ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 35) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾಗಿದೆ) 3ನೇ ಪ್ರಕರಣದ (1)ನೇ ಉಪ–ಪ್ರಕರಣದ ನಾಲ್ಕನೇ ಪರಂತುಕದಲ್ಲಿ,–

(i) (ಎಎ) ಖಂಡದಲ್ಲಿ "3000 ಕೆ.ಜಿ. ಗಳು" ಎಂಬ ಅಂಕಿಗಳು ಮತ್ತು ಪದಗಳಿಗೆ "5500 ಕೆ.ಜಿ. ಗಳು" ಎಂಬ ಅಂಕಿಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (ಬಿ) ಖಂಡದ ಟಿಪ್ಪಣಿಯ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಸಿ) ನಿರ್ಮಾಣ ಯಂತ್ರಗಳ ವಾಹನಗಳ (ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ 2ನೇ ನಿಯಮದ (ಸಿಎ) ಖಂಡದ ಅಡಿಯಲ್ಲಿ ಪರಿಭಾಷಿಸಾದಂತೆ) ಮತ್ತು ಏರ್ ಕಂಪ್ರೆಸರ್ ಹಾಗೂ ಜನರೇಟರ್‌ಗಳನ್ನು ಅಳವಡಿಸಿರುವ ವಾಹನಗಳ ಸಂದರ್ಭದಲ್ಲಿ ಅನುಸೂಚಿಯ ಭಾಗ ಎ–7 ರಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು."

3. 15ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 15ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ "ಸಂದಾಯ ಮಾಡತಕ್ಕದ್ದು" ಎಂಬ ಪದಗಳ ತರುವಾಯ "ಮತ್ತು ಆ ಅಪೀಲು ಅಂಥ ಮೊಬಲಗನ್ನು ಸಂದಯ ಮಾಡಿದ ರುಜುವಾತಿನೊಡನೆ ಇರತಕ್ಕದ್ದು." ಎಂಬ ಪದಗಳನ್ನು ಸೇರಿಸತಕ್ಕದ್ದು.

4. ಅನುಸೂಚಿಯ ತಿದ್ದುಪಡಿ.– ಮೂಲ ಅಧಿನಿಯಮದ ಅನುಸೂಚಿಯಲ್ಲಿ,–

(1) ಭಾಗ–ಎ ದಲ್ಲಿ,–

(i) 1ನೇ ಬಾಬಿನ 3ನೇ ಅಂಕಣದಲ್ಲಿ "25.00" ಎಂಬ ಅಂಕಿಗಳಿಗೆ "125.00" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(ii) 3ನೇ ಬಾಬಿನ (1)ನೇ ಉಪಬಾಬಿನ (ಬಿ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

(iii) 4ನೇ ಬಾಬಿನ 3(ಎ) ಉಪಬಾಬಿನ 3ನೇ ಅಂಕಣದಲ್ಲಿ "500.00" ಎಂಬ ಅಂಕಿಗಳಿಗೆ "600.00" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(iv) 5ನೇ ಬಾಬಿನ (ಬಿ) ಖಂಡದ 3ನೇ ಅಂಕಣದಲ್ಲಿ "700.00" ಎಂಬ ಅಂಕಿಗಳಿಗೆ "1000.00" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(v) 6ನೇ ಬಾಬಿನ (ಎ) ಖಂಡದ 3ನೇ ಅಂಕಣದಲ್ಲಿ "2500.00" ಎಂಬ ಅಂಕಿಗಳಿಗೆ "2750.00" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(vi) 11ನೇ ಬಾಬು ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

(vii) 14ನೇ ಬಾಬಿನ (2)ನೇ ಉಪಬಾಬಿನ 3ನೇ ಅಂಕಣದಲ್ಲಿ "187.50" ಎಂಬ ಅಂಕಿಗಳಿಗೆ "500.00" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(2) ಅನುಸೂಚಿಯ ಭಾಗ–ಎ1ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಭಾಗ ಎ1

[3(1)ನೇ ಪ್ರಕರಣ ನೋಡಿ]

ದ್ವಿಚಕ್ರ ವಾಹನಗಳಿಗೆ ಆಜೀವ ತೆರಿಗೆ

ಕ್ರ. ಸಂ.	ವಾಹನಗಳ ವರ್ಗ	ರೂ.50000ಕ್ಕೆ ಮೀರಿರದ ಬೆಲೆಯ ಮೋಟಾರು ಸೈಕಲ್ಲುಗಳು	ರೂ.50000ಕ್ಕೆ ಮೀರಿದ ಬೆಲೆಯ ಮೋಟಾರು ಸೈಕಲ್ಲುಗಳು	ವಿದ್ಯುಚ್ಛಕ್ತಿ ಚಾಲಿತ ಮೋಟಾರು ಸೈಕಲ್ಲುಗಳು
ಎ.	ಹೊಸ ವಾಹನಗಳ ನೋಂದಣಿಯ ಸಮಯದಲ್ಲಿ	ವಾಹನದ ಬೆಲೆಯ ಶೇಕಡ 10	ವಾಹನದ ಬೆಲೆಯ ಶೇಕಡ 12	ವಾಹನದ ಬೆಲೆಯ ಶೇಕಡ 4
ಬಿ.	ವಾಹನವು ಈಗಾಗಲೇ ನೋಂದಣಿಯಾಗಿದ್ದು ಮತ್ತು ನೋಂದಣಿಯ ತಿಂಗಳಿನಿಂದ ಅದರ ವಯಸ್ಸು	ಎ ಖಂಡದಡಿಯಲ್ಲಿ ವಿಧಿಸುವ ಶೇಕಡಾವಾರು ಆಜೀವ ತೆರಿಗೆ	ಎ ಖಂಡದಡಿಯಲ್ಲಿ ವಿಧಿಸುವ ಶೇಕಡಾವಾರು ಆಜೀವ ತೆರಿಗೆ	ಎ ಖಂಡದ ಡಿಯಲ್ಲಿ ವಿಧಿಸುವ ಶೇಕಡಾ ವಾರು ಆಜೀವ ತೆರಿಗೆ
1.	2 ವರ್ಷಗಳು ಮೀರದಿದ್ದಲ್ಲಿ	93%	93%	93%
2.	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳು ಮೀರಿರದಿದ್ದಲ್ಲಿ	87%	87%	87%
3.	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳು ಮೀರಿರದಿದ್ದಲ್ಲಿ	81%	81%	81%

4.	4 ವರ್ಷಗಳು ಮೀರಿದ್ದು ಆದರೆ 5 ವರ್ಷಗಳು ಮೀರಿರದಿದ್ದಲ್ಲಿ	75%	75%	75%
5.	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳನ್ನು ಮೀರಿರದಿದ್ದಲ್ಲಿ	69%	69%	69%
6.	6 ವರ್ಷಗಳನ್ನು ಮೀರಿದ್ದು ಆದರೆ 7 ವರ್ಷಗಳು ಮೀರಿರದಿದ್ದಲ್ಲಿ	64%	64%	64%
7.	7 ವರ್ಷಗಳು ಮೀರಿದ್ದು ಆದರೆ 8 ವರ್ಷಗಳು ಮೀರಿರದಿದ್ದಲ್ಲಿ	59%	59%	59%
8.	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳು ಮೀರಿರದಿದ್ದಲ್ಲಿ	54%	54%	54%
9.	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳು ಮೀರಿರದಿದ್ದಲ್ಲಿ	49%	49%	49%
10.	10 ವರ್ಷಗಳು ಮೀರಿದ್ದು ಆದರೆ 11 ವರ್ಷಗಳು ಮೀರಿರದಿದ್ದಲ್ಲಿ	45%	45%	45%

11.	11 ವರ್ಷಗಳನ್ನು ಮೀರಿದ್ದು ಆದರೆ 12ವರ್ಷಗಳನ್ನು ಮೀರಿರದಿದ್ದಲ್ಲಿ	41%	41%	41%
12.	12 ವರ್ಷಗಳನ್ನು ಮೀರಿದ್ದು ಆದರೆ 13 ವರ್ಷಗಳನ್ನು ಮೀರಿರದಿದ್ದಲ್ಲಿ	37%	37%	37%
13.	13 ವರ್ಷಗಳನ್ನು ಮೀರಿದ್ದು ಆದರೆ 14 ವರ್ಷಗಳನ್ನು ಮೀರಿರದಿದ್ದಲ್ಲಿ	33%	33%	33%
14.	14 ವರ್ಷಗಳು ಮೀರಿದ್ದು ಆದರೆ 15 ವರ್ಷಗಳನ್ನು ಮೀರಿರದಿದ್ದಲ್ಲಿ	29%	29%	29%
15.	15 ವರ್ಷಗಳನ್ನು ಮೀರಿದ್ದಲ್ಲಿ	25%	25%	25%

ಟಿಪ್ಪಣಿಗಳು:

1. 2010ನೇ ಏಪ್ರಿಲ್ 1ನೇ ದಿನಾಂಕಕ್ಕೆ ಮೊದಲು ಆಜೀವ ತೆರಿಗೆಯು ಬಾಕಿಯಿದ್ದು, ಆದರೆ ಅದನ್ನು ಸಂದಾಯ ಮಾಡದಿದ್ದ ವಾಹನಗಳ ಸಂಬಂಧದಲ್ಲಿ, ಅಂಥ ತೆರಿಗೆಯನ್ನು, ಯಾವುದಾದರೂ ದಂಡವು ಬಾಕಿಯಿದ್ದರೆ, ಅದರ ಸಮೇತವಾಗಿ, ಅಂಥ ದಿನದ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ದರಗಳಲ್ಲಿ ಸಂಗ್ರಹಿಸತಕ್ಕದ್ದು.
2. 2007ರ ಏಪ್ರಿಲ್ 1ನೇ ದಿನಾಂಕದಂದು ಅಥವಾ ಆ ತರುವಾಯ ನೋಂದಾಣಿಯಾದ ವಾಹನಗಳ ಸಂಬಂಧದಲ್ಲಿ ಖರೀದಿ ಇನ್‌ವಾಯ್ಸ್‌ನ್ನು ಮಂಡಿಸತಕ್ಕದ್ದು.

3. ಒಂದು ಮೋಟಾರು ವಾಹನದ ಸಂಬಂಧದಲ್ಲಿ ವಾಹನದ ಬೆಲೆ ಎಂದರೆ:–

(ಎ) ಭಾರತದಲ್ಲಿ ತಯಾರಾದ ವಾಹನದ ಸಂಬಂಧದಲ್ಲಿ ಆಹನದ ತಯಾರಕನಿಂದಾಗಲೀ ಅಥವಾ ವ್ಯಾಪಾರಿಯು ನೀಡಿದ, ಖರೀದಿ ಬೆಲೆ ಪಟ್ಟಿಯನ್ವಯ ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬಕಾರಿ ಸುಂಕ, ಮಾರಾಟ ತೆರಿಗೆ, ಅಧಿಕರ ಅಥವಾ ಉಪಕರ, ಪ್ರವೇಶ ತೆರಿಗೆ ಇತ್ಯಾದಿಗಳನ್ನು ಒಳಗೊಂಡ ವಾಹನದ ಬೆಲೆ; ಮತ್ತು

(ಬಿ) ಆಮದಾದ ಮೋಟಾರು ವಾಹನದ ಸಂಬಂಧದಲ್ಲಿ, ತಯರಾದ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೇ, ಮೋಟಾರನ್ನು ಆಮದು ಮಾಡಿಕೊಳ್ಳುವಾಗ ಆಗುವ ಒಟ್ಟು ಬೆಲೆ, ಎಂದರೆ, ಆಮದು ರಫ್ತು ಸರಕುಗಳ ವಿವರಪಟ್ಟಿ ಅಥವಾ ಅಂಥ ಇತರ ದಾಖಲೆಯಲ್ಲಿ ಹಿಂಬರಹ ಮಾಡಿದಂತೆ ಮತ್ತು ಸೀಮಾ ಸುಂಕಗಳ ಅಧಿನಿಯಮ, 1962ರಡಿಯಲ್ಲಿ ಹಾಗೆ ಕರನಿರ್ಧರಣೆ ಮಾಡಲಾದ, ವಿಧಿಸಿದ ಸೀಮಾಸುಂಕ, ಮಾಡಿದ ಸಾಗಣೆ ಬಾಡಿಗೆಯ ವೆಚ್ಚಗಳು ಮತ್ತು ಸೀಮಾ ಸುಂಕಗಳ ಇಲಾಖೆಯು ಅಥವಾ ಯಾವುದೇ ಇತರ ಇಲಾಖೆಯು ವಿಧಿಸಿದ ಹೆಚ್ಚುವರಿ ಸುಂಕ/ದಂಡವು ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ವಿಧಿಸಿದ ಇತರ ತೆರಿಗೆಗಳ ಜೊತೆ, ಮೋಟಾರು ವಾಹನದ ಮೌಲ್ಯ.

(3) ಅನುಸೂಚಿಯ ಭಾಗ–ಎ5ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಭಾಗ ಎ5

[3(1)ನೇ ಪ್ರಕರಣ ನೋಡಿ]

ಮೋಟಾರು ಕಾರುಗಳು, ಜೀಪುಗಳು, ಓಮಿನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು

ಕ್ರ ಸಂ.	ವಾಹನಗಳ ವರ್ಗ	5 ಚದರ ಮೀಟರುಗಳ ವರೆಗೆ ಫ್ಲೋರ್ ವಿಸ್ತೀರ್ಣ ಹೊಂದಿರುವ, 5 ಲಕ್ಷ ರೂಪಾಯಿಗಳು ಮೀರಿದ ಬೆಲೆಯ ಮೋಟಾರು ಕಾರುಗಳು, ಜೀಪುಗಳು, ಓಮ್ನಿ ಬಸ್ಸುಗಳು ಮತ್ತು	5 ಚದರ ಮೀಟರುಗಳ ವರೆಗೆ ಫ್ಲೋರ್ ವಿಸ್ತೀರ್ಣ ಹೊಂದಿರುವ, 5 ಲಕ್ಷ ರೂಪಾಯಿಗಳು ಮೀರಿದ ಆದರೆ 10 ಲಕ್ಷ ರೂಪಾಯಿಗಳನ್ನು ಮೀರಿದ	5 ಚದರ ಮೀಟರುಗಳ ವರೆಗೆ ಫ್ಲೋರ್ ವಿಸ್ತೀರ್ಣ ಹೊಂದಿರುವ, 10 ಲಕ್ಷ ರೂಪಾಯಿಗಳು ಮೀರಿದ ಆದರೆ 20 ಲಕ್ಷ	5 ಚದರ ಮೀಟರುಗಳ ವರೆಗೆ ಫ್ಲೋರ್ ವಿಸ್ತೀರ್ಣ ಹೊಂದಿರುವ, 20 ಲಕ್ಷ ರೂಪಾಯಿಗಳನ್ನು ಮೀರಿದ ಬೆಲೆಯ ಮೋಟಾರು	ವಿದ್ಯುಚ್ಛಕ್ತಿ ಚಾಲಿತ ಮೋಟಾರು ಕಾರುಗಳು

		ಪಾಸಿ ಸೇವಾ ವಾಹನಗಳು	ಬೆಲೆಯ ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಪಾಸಿ ಸೇವಾ ವಾಹನಗಳು	ರೂಪಾಯಿಗಳನ್ನು ಮೀರಿರದ ಬೆಲೆಯ ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಪಾಸಿ ಸೇವಾ ವಾಹನಗಳು	ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಪಾಸಿ ಸೇವಾ ವಾಹನಗಳು	
1	2	3	4	5	6	7
ಎ	ಹೊಸ ವಾಹನಗಳ ನೋಂದಣಿಯ ಸಮಯದಲ್ಲಿ	ವಾಹನದ ಬೆಲೆಯ ಶೇಕಡ 13	ವಾಹನದ ಬೆಲೆಯ ಶೇಕಡ 14	ವಾಹನದ ಬೆಲೆಯ ಶೇಕಡ 17	ವಾಹನದ ಬೆಲೆಯ ಶೇಕಡ 18	ವಾಹನದ ಬೆಲೆಯ ಶೇಕಡ 4
ಬಿ	ವಾಹನವು ಈಗಾಗಲೇ ನೋಂದಣಿಯಾಗಿದ್ದು ಮತ್ತು ನೋಂದಣಿ ದಿನಾಂಕದಂದು ಅದರ ವಯಸ್ಸು	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ
1	2 ವರ್ಷಗಳನ್ನು ಮೀರಿರದಿದ್ದಲ್ಲಿ	93%	93%	93%	93%	93%
2	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳನ್ನು ಮೀರಿರದಿದ್ದಲ್ಲಿ	87%	87%	87%	87%	87%
3	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳನ್ನು ಮೀರಿರದಿದ್ದಲ್ಲಿ	81%	81%	81%	81%	81%

4	4 ವರ್ಷಗಳು ಮೀರಿದ್ದು ಆದರೆ 5 ವರ್ಷಗಳನ್ನು ಮೀರಿರದಿದ್ದಲ್ಲಿ	75%	75%	75%	75%	75%
5	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳನ್ನು ಮೀರಿರ ದಿದ್ದಲ್ಲಿ	69%	69%	69%	69%	69%
6	6 ವರ್ಷಗಳು ಮೀರಿದ್ದು ಆದರೆ 7 ವರ್ಷಗಳನ್ನು ಮೀರಿರ ದಿದ್ದಲ್ಲಿ	64%	64%	64%	64%	64%
7	7 ವರ್ಷಗಳು ಮೀರಿದ್ದು ಆದರೆ 8 ವರ್ಷಗಳನ್ನು ಮೀರಿರ ದಿದ್ದಲ್ಲಿ	59%	59%	59%	59%	59%
8	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳನ್ನು ಮೀರಿರ ದಿದ್ದಲ್ಲಿ	54%	54%	54%	54%	54%
9	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳನ್ನು ಮೀರಿರ ದಿದ್ದಲ್ಲಿ	49%	49%	49%	49%	49%
10	10 ವರ್ಷಗಳು ಮೀರಿದ್ದು ಆದರೆ 11 ವರ್ಷಗಳೆನ್ನು ಮೀರಿರ ದಿದ್ದಲ್ಲಿ	45%	45%	45%	45%	45%

11	11 ವರ್ಷಗಳು ಮೀರಿದ್ದು ಆದರೆ 12 ವರ್ಷಗಳನ್ನು ಮೀರಿರದಿದ್ದಲ್ಲಿ	41%	41%	41%	41%	41%
12	12 ವರ್ಷಗಳು ಮೀರಿದ್ದು ಆದರೆ 13 ವರ್ಷಗಳನ್ನು ಮೀರಿರದಿದ್ದಲ್ಲಿ	37%	37%	37%	37%	37%
13	13 ವರ್ಷಗಳು ಮೀರಿದ್ದು ಆದರೆ 14 ವರ್ಷಗಳನ್ನು ಮೀರಿರದಿದ್ದಲ್ಲಿ	33%	33%	33%	33%	33%
14	14 ವರ್ಷಗಳು ಮೀರಿದ್ದು ಆದರೆ 15 ವರ್ಷಗಳನ್ನು ಮೀರಿರದಿದ್ದಲ್ಲಿ	29%	29%	29%	29%	29%
15	15 ವರ್ಷಗಳನ್ನು ಮೀರಿದ್ದಲ್ಲಿ	25%	25%	25%	25%	25%

ಟಿಪ್ಪಣಿಗಳು :

1. 2010ನೇ ಏಪ್ರಿಲ್ 1ನೇ ದಿನಾಂಕಕ್ಕೆ ಮೊದಲು ಆಜೀವ ತೆರಿಗೆಯು ಬಾಕಿಯಿದ್ದು, ಆದರೆ ಅದನ್ನು ಸಂದಾಯ ಮಾಡದಿದ್ದ ವಾಹನಗಳ ಸಂಬಂಧದಲ್ಲಿ, ಅಂಥ ತೆರಿಗೆಯನ್ನು, ಯಾವುದದರೂ ದಂಡವು ಬಾಕಿಯಿದ್ದರೆ, ಅದರ ಸಮೇತವಾಗಿ, ಅಂಥ ದಿನದ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ದರಗಳಲ್ಲಿ ಸಂಗ್ರಹಿಸತಕ್ಕದ್ದು.

2. 2007ರ ಏಪ್ರಿಲ್ 1ನೇ ದಿನಾಂಕದಂದು ಅಥವಾ ಆ ತರುವಾಯ ನೋಂದಣಿಯಾದ ವಾಹನಗಳ ಸಂಬಂಧದಲ್ಲಿ ಖರೀದಿ ಇನ್‌ವಾಯ್ಸ್‌ನ್ನು ಮಂಡಿಸತಕ್ಕದ್ದು.

3. ಒಂದು ಮೋಟಾರು ವಾಹನದ ಸಂಬಂಧದಲ್ಲಿ ವಾಹನದ ಬೆಲೆ ಎಂದರೆ:–

(ಎ) ಭಾರತದಲ್ಲಿ ತಯಾರಾದ ವಾಹನದ ಸಂಬಂಧದಲ್ಲಿ ವಾಹನದ ತಯಾರಕ ಅಥವಾ ವ್ಯಾಪಾರಿ ನೀಡಿದ, ಖರೀದಿ ಬೆಲೆ ಪಟ್ಟಿಯನ್ವಯ ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬಕಾರಿ ಸುಂಕ, ಮಾರಾಟ ತೆರಿಗೆ, ಅಧಿಕರ ಅಥವಾ ಉಪಕರ, ಪ್ರವೇಶ ತೆರಿಗೆ ಇತ್ಯಾದಿಗಳನ್ನು ಒಳಗೊಂಡ ವಾಹನದ ಬೆಲೆ.

(ಬಿ) ಆಮದಾದ ಮೋಟಾರು ವಾಹನದ ಸಂಬಂಧದಲ್ಲಿ, ತಯಾರಾದ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೇ, ಮೋಟಾರನ್ನು ಆಮದು ಮಾಡಿಕೊಳ್ಳುವಾಗ ಆಗುವ ಬೊಟ್ಟು ಬೆಲೆ, ಎಂದರೆ, ಆಮದು ರಫ್ತು ಸರಕುಗಳ ವಿವರಪಟ್ಟಿ ಅಥವಾ ಅಂಥ ಇತರ ದಾಖಲೆಯಲ್ಲಿ ಹಿಂಬರಹ ಮಾಡಿದಂತೆ ಮತ್ತು ಸೀಮಾ ಸುಂಕಗಳ ಅಧಿನಿಯಮ 1962ರಡಿಯಲ್ಲಿ ಹಾಗೆ ಕರನಿರ್ಧರಣೆ ಮಾಡಲಾದ, ವಿಧಿಸಿದ ಸೀಮಾಸುಂಕ, ಮಾಡಿದ ಸಾಗಣೆ ಬಾಡಿಗೆಯ ವೆಚ್ಚಗಳು ಮತ್ತು ಸೀಮಾ ಸುಂಕಗಳು ಇಲಾಖೆಯು ಅಥವಾ ಯಾವುದೇ ಇತರ ಇಲಾಖೆಯು ವಿಧಿಸಿದ ಹೆಚ್ಚುವರಿ ಸುಂಕ/ದಂಡವು ಇದ್ದಲ್ಲಿ, ಅವುಗಳನ್ನು ಒಳಗೊಂಡಂತೆ ವಿಧಿಸಿದ ಇತರ ತೆರಿಗೆಗಳ ಜೊತೆ, ಮೋಟಾರು ವಾಹನದ ಮೌಲ್ಯ.

(4) ಅನುಸೂಚಿಯ ಭಾಗ–ಎ6ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಭಾಗ ಎ6

[3(1)ನೇ ಪ್ರಕರಣ ನೋಡಿ]

1500 ಕೆ.ಜಿ. ಮೀರಿದ ಆದರೆ 5500 ಕೆ.ಜಿ. ಹೇರುಭಾರ ಮೀರದ ಸರಕು ಸಾಗಾಣೆ ವಾಹನಗಳಿಗೆ ಅವುಗಳನ್ನು ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ಉಪಯೋಗಿಸಿರಲಿ ಅಥವಾ ಇಲ್ಲದಿರಲಿ, ಜೀವಾವಧಿ ತೆರಿಗೆ

ಬಾಬಿನ ಸಂಖ್ಯೆ	ವಾಹನಗಳ ವರ್ಗ	1500 ಕೆ.ಜಿ. ಮೀರಿದ ಆದರೆ 2000 ಕೆ.ಜಿ ಮೀರದ ಒಟ್ಟು ಭಾರ ಹೊಂದಿರುವ ಸರಕು ಸಾಗಾಣೆ ವಾಹನಗಳಿಗೆ ರೂ.ಗಳಲ್ಲಿ	2000 ಕೆ.ಜಿ. ಮೀರಿದ ಆದರೆ 3000 ಕೆ.ಜಿ ಮೀರದ ಒಟ್ಟು ಭಾರ ಹೊಂದಿರುವ ಸರಕು ಸಾಗಾಣೆ ವಾಹನಗಳಿಗೆ ರೂ.ಗಳಲ್ಲಿ	3000 ಕೆ.ಜಿ.ಮೀರಿದ ಆದರೆ 5500 ಕೆ.ಜಿ ಮೀರದ ಒಟ್ಟು ಭಾರ ಹೊಂದಿರುವ ಸರಕು ಸಾಗಾಣೆ ವಾಹನಗಳಿಗೆ ರೂ.ಗಳಲ್ಲಿ
1	2	3	4	5
ಎ.	ಹೊಸ ವಾಹನಗಳ ನೋಂದಣಿಯ ಸಮಯದಲ್ಲಿ	10,000	15,000	20,000
ಬಿ.	ವಾಹನವು ಈಗಾಗಲೇ ನೋಂದಣಿಯಾಗಿದ್ದು ಮತ್ತು ನೋಂದಣಿಯ ತಿಂಗಳಿನಿಂದ ಅದರ ವಯಸ್ಸು			
1.	2 ವರ್ಷಗಳು ಮೀರದಿದ್ದಲ್ಲಿ	9,300	13,950	18,600
2	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳು ಮೀರಿರದಿದ್ದಲ್ಲಿ	8,700	13,050	17,400

3.	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳು ಮೀರಿರದಿದ್ದಲ್ಲಿ	8,100	12,150	16,200
4.	4 ವರ್ಷಗಳು ಮೀರಿದ್ದು ಆದರೆ 5 ವರ್ಷಗಳು ಮೀರಿರದಿದ್ದಲ್ಲಿ	7,500	11,250	15,000
5.	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳು ಮೀರಿರದಿದ್ದಲ್ಲಿ	6,900	10,350	13,800
6.	6 ವರ್ಷಗಳು ಮೀರಿದ್ದು ಆದರೆ 7 ವರ್ಷಗಳು ಮೀರಿರದಿದ್ದಲ್ಲಿ	6,400	9,600	12,800
7.	7 ವರ್ಷಗಳು ಮೀರಿದ್ದು ಆದರೆ 8 ವರ್ಷಗಳು ಮೀರಿರದಿದ್ದಲ್ಲಿ	5,900	8,850	11,800
8.	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳು ಮೀರಿರದಿದ್ದಲ್ಲಿ	5,400	8,100	10,800
9.	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳು ಮೀರಿರದಿದ್ದಲ್ಲಿ	4,900	7,350	9,800

10.	10 ವರ್ಷಗಳು ಮೀರಿದ್ದು ಆದರೆ 11 ವರ್ಷಗಳು ಮೀರಿರದಿದ್ದಲ್ಲಿ	4,500	6,750	9,000
11.	11 ವರ್ಷಗಳು ಮೀರಿದ್ದು ಆದರೆ 12 ವರ್ಷಗಳನ್ನು ಮೀರಿರದಿದ್ದಲ್ಲಿ	4,100	6,150	8,200
12.	12 ವರ್ಷಗಳು ಮೀರಿದ್ದು ಆದರೆ 13 ವರ್ಷಗಳನ್ನು ಮೀರಿರದಿದ್ದಲ್ಲಿ	3,700	5,550	7,400
13.	13 ವರ್ಷಗಳು ಮೀರಿದ್ದು ಆದರೆ 14 ವರ್ಷಗಳನ್ನು ಮೀರಿರದಿದ್ದಲ್ಲಿ	3,300	4,950	6,600
14.	14 ವರ್ಷಗಳು ಮೀರಿದ್ದು ಆದರೆ 15 ವರ್ಷಗಳನ್ನು ಮೀರಿರದಿದ್ದಲ್ಲಿ	2,900	4,350	5,800
15.	15 ವರ್ಷಗಳನ್ನು ಮೀರಿದ್ದಲ್ಲಿ	2,500	3,75	5,000

ಟಿಪ್ಪಣಿ:

2010ನೇ ಏಪ್ರಿಲ್ 1ನೇ ದಿನಾಂಕಕ್ಕೆ ಮೊದಲು ತೆರಿಗೆ ಬಾಕಿಯಿದ್ದು ಆದರೆ ಅದನ್ನು ಸಂದಾಯ ಮಾಡದೇ ಇರುವ ವಾಹನಗಳ ಸಂಬಂಧದಲ್ಲಿ ಅಂಥ ತೆರಿಗೆಯನ್ನು ಅಂಥ ದಿನಾಂಕಕ್ಕೆ ಮೊದಲು ಇದ್ದ ದರಗಳಲ್ಲಿ ಬಾಕಿ ಇರುವ ದಂಡನೆಯೊಡನೆ ಯಾವುದಾದರೂ ಬಾಕಿ ಇದ್ದಲ್ಲಿ, ಸಂಗ್ರಹಿಸಿತಕ್ಕದ್ದು"

(5) ಅನುಸೂಚಿಯ ಭಾಗ–6ರ ತರುವಾಯ ಈ ಮುಂದಿನ ಭಾಗ–ಎ7ನ್ನು ಸೇರಿಸತಕ್ಕದ್ದು, ಎಂದರೆ:–

"ಭಾಗ ಎ7

[3(1)ನೇ ಪ್ರಕರಣ ನೋಡಿ]

ನಿರ್ಮಾಣ ಸಂಬಂಧಿತ ಯಂತ್ರ ಅಳವಡಿಸಲಾದ ವಾಹನಗಳು (ಕೇಂದ್ರ ಮೋಟಾರು ವಾಹನಗಳ ನಿಯಮ 1989ರ ನಿಯಮ 2ಸಿಎ ಅಡಿಯಲ್ಲಿ ಪರಿಭಾಷಿಸಲಾದಂತೆ) ಮತ್ತು ಏರ್ ಕಂಪ್ರೆಸ್ಸರ್ ಮತ್ತು ಜನರೇಟರ್‌ಗಳನ್ನು ಅಳವಡಿಸಿರುವ ವಾಹನಗಳ ಜೀವಾವಧಿ ತೆರಿಗೆ ದರಗಳು

ಕ್ರಮ ಸಂಖ್ಯೆ	ವಾಹನಗಳ ವರ್ಗ	
1	2	3
ಎ.	ಹೊಸ ವಾಹನಗಳ ನೋಂದಣಿಯ ಸಮಯದಲ್ಲಿ	ವಾಹನ ಮೌಲ್ಯದ ಶೇಕಡಾ 10 ರಷ್ಟು
ಬಿ.	ವಾಹನವು ಈಗಾಗಲೇ ನೋಂದಣಿಯಾಗಿದ್ದು ಮತ್ತು ನೋಂದಣಿಯ ತಿಂಗಳಿನಿಂದ ಅದರ ವಯಸ್ಸು	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ
1.	2 ವರ್ಷಗಳು ಮೀರದಿದ್ದಲ್ಲಿ	93%
2.	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳು ಮೀರಿರದಿದ್ದಲ್ಲಿ	87%
3.	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳು ಮೀರಿರದಿದ್ದಲ್ಲಿ	81%
4.	4 ವರ್ಷಗಳು ಮೀರಿದ್ದು ಆದರೆ 5 ವರ್ಷಗಳು ಮೀರಿರದಿದ್ದಲ್ಲಿ	75%
5.	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳು ಮೀರಿರದಿದ್ದಲ್ಲಿ	69%
6.	6 ವರ್ಷಗಳು ಮೀರಿದ್ದು ಆದರೆ 7 ವರ್ಷಗಳು ಮೀರಿರದಿದ್ದಲ್ಲಿ	64%

7.	7 ವರ್ಷಗಳು ಮೀರಿದ್ದು ಆದರೆ 8 ವರ್ಷಗಳು ಮೀರಿರದಿದ್ದಲ್ಲಿ	59%
8.	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳು ಮೀರಿರದಿದ್ದಲ್ಲಿ	54%
9.	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳು ಮೀರಿರದಿದ್ದಲ್ಲಿ	49%
10.	10 ವರ್ಷಗಳು ಮೀರಿದ್ದು ಆದರೆ 11 ವರ್ಷಗಳು ಮೀರಿರದಿದ್ದಲ್ಲಿ	45%
11.	11 ವರ್ಷಗಳು ಮೀರಿದ್ದು ಆದರೆ 12 ವರ್ಷಗಳನ್ನು ಮೀರಿರದಿದ್ದಲ್ಲಿ	41#
12.	12 ವರ್ಷಗಳು ಮೀರಿದ್ದು ಆದರೆ 13 ವರ್ಷಗಳನ್ನು ಮೀರಿರದಿದ್ದಲ್ಲಿ	37%
13.	13 ವರ್ಷಗಳು ಮೀರಿದ್ದು ಆದರೆ 14 ವರ್ಷಗಳನ್ನು ಮೀರಿರದಿದ್ದಲ್ಲಿ	33%
14.	14 ವರ್ಷಗಳು ಮೀರಿದ್ದು ಆದರೆ 15 ವರ್ಷಗಳನ್ನು ಮೀರಿರದಿದ್ದಲ್ಲಿ	29%
15.	15 ವರ್ಷಗಳನ್ನು ಮೀರಿದ್ದಲ್ಲಿ	25%

ಟಿಪ್ಪಣಿಗಳು :

1. 2010ನೇ ಏಪ್ರಿಲ್ 1ನೇ ದಿನಾಂಕಕ್ಕೆ ಮೊದಲು ತೆರಿಗೆಯು ಬಾಕಿಯಿದ್ದು, ಆದರೆ ಅದನ್ನು ಸಂದಾಯ ಮಾಡದಿದ್ದ ವಾಹನಗಳ ಸಂಬಂಧದಲ್ಲಿ, ಅಂಥ ತೆರಿಗೆಯನ್ನು, ಯಾವುದಾದರೂ ದಂಡವು ಬಾಕಿಯಿದ್ದರೆ, ಅದರ ಸಮೇತವಾಗಿ, ಅಂಥ ದಿನದ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ದರಗಳಲ್ಲಿ ಸಂಗ್ರಹಿಸತಕ್ಕದ್ದು.
2. 2007ರ ಏಪ್ರಿಲ್ 1ನೇ ದಿನಾಂಕದಂದು ಅಥವಾ ಆ ತರುವಾಯ ನೋಂದಣಿಯಾದ ವಾಹನಗಳ ಸಂಬಂಧದಲ್ಲಿ ಖರೀದಿ ಬೆಲೆ ಪಟ್ಟಿಯನ್ನು ಮಂಡಿಸತಕ್ಕದ್ದು.

3. ಒಂದು ಮೋಟಾರು ವಾಹನದ ಸಂಬಂಧದಲ್ಲಿ ವಾಹನದ ಬೆಲೆ ಎಂದರೆ:–

(ಎ) ಭಾರತದಲ್ಲಿ ತಯಾರಾದ ವಾಹನದ ಸಂಬಂಧದಲ್ಲಿ ವಾಹನದ ತಯಾರಕ ಅಥವಾ ವ್ಯಾಪಾರಿ ನೀಡಿದ, ಖರೀದಿ ಬೆಲೆ ಪಟ್ಟಿಯನ್ವಯ ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬಕಾರಿ ಸುಂಕ, ಮಾರಾಟ ತೆರಿಗೆ, ಅಧಿಕರ ಅಥವಾ ಉಪಕರ, ಪ್ರವೇಶ ತೆರಿಗೆ ಇತ್ಯಾದಿಗಳನ್ನು ಒಳಗೊಂಡ ವಾಹನದ ಬೆಲೆ.

(ಬಿ) ಆಮದಾದ ಮೋಟಾರು ವಾಹನದ ಸಂಬಂಧದಲ್ಲಿ, ತಯಾರಾದ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೇ, ಮೋಟಾರನ್ನು ಆಮದು ಮಾಡಿಕೊಳ್ಳುವಾಗ ಆಗುವ ಒಟ್ಟು ಬೆಲೆ, ಎಂದರೆ ಆಮದು ರಫ್ತು ಸರಕುಗಳ ವಿವರಪಟ್ಟಿ ಅಥವಾ ಅಂಥ ಇತರ ದಾಖಲೆಯಲ್ಲಿ ಹಿಂಬರಹ ಮಾಡಿದಂತೆ ಮತ್ತು ಸೀಮ ಸುಂಕಗಳ ಅಧಿನಿಯಮ, 1962ರಡಿಯಲ್ಲಿ ಹಾಗೆ ಕರನಿರ್ಧರಣೆ ಮಾಡಲಾದ ವಿಧಿಸಿದ ಸೀಮಾ ಸುಂಕ, ಮಾಡಿದ ಸಾಗಣೆ ಬಾಡಿಗೆಯ ವೆಚ್ಚಗಳು ಮತ್ತು ಸೀಮಾ ಸುಂಕಗಳ ಇಲಾಖೆಯು ಅಥವಾ ಯಾವುದೇ ಇತರ ಇಲಾಖೆಯು ವಿಧಿಸಿದ ಹೆಚ್ಚುವರಿ ಸುಂಕ/ದಂಡವು ಇದ್ದಲ್ಲಿ, ಅವುಗಳನ್ನು ಒಳಗೊಂಡಂತೆ ವಿಧಿಸಿದ ಇತರ ತೆರಿಗೆಗಳ ಜೊತೆ, ಮೋಟಾರು ವಾಹನದ ಮೌಲ್ಯ."

(6) ಅನುಸೂಚಿ ಭಾಗ–ಸಿ5ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಭಾಗ ಸಿ5

[7(3)ನೇ ಪ್ರಕರಣ ನೀಡಿ]

1500 ಕೆ.ಜಿ. ಮೀರಿದ ಆದರೆ 5500 ಕೆ.ಜಿ. ಹೇರುಭಾರ ಮೀರದ ಸರಕು ಸಾಗಾಣೆ ವಾಹನಗಳಿಗೆ 1–4–2007 ರಂದು ಅಥವಾ ತದನಂತರ ಭಾಗ–ಎ6ರ ಅಡಿಯಲ್ಲಿ ಆಜೀವ ತೆರಿಗೆಯನ್ನು ಸಂದಾಯ ಮಾಡಲಾದ ವಾಹನಗಳ ಸಂಬಂಧದಲ್ಲಿ ಹಿಂದಿರುಗಿಸಬೇಕಾದುದಕ್ಕೆ ಸಂಬಂಧಪಟ್ಟ ಕೋಷ್ಟಕ

		ಹಿಂದಿರುಗಿಸಬೇಕಾದ ಜೀವಾವಧಿ ತೆರಿಗೆಯ ಶೇಕಡವಾರು		
ಕ್ರ. ಸಂ.	ವಾಹನದ ನೋಂದಣಿಯನ್ನು ತೆಗೆದು ಹಾಕಿದ್ದರೆ ಅಥವಾ ವಾಹನದ ನೋಂದಣಿಯನ್ನು ರದ್ದುಗೊಳಿಸಿದ್ದರೆ	1500 ಕೆ.ಜಿ. ಮೀರಿದ ಆದರೆ 2000 ಕೆ.ಜಿ ಮೀರದ ಇಒಟ್ಟು ಭಾರ ಹೊಂದಿರುವ ಸರಕು ಸಾಗಾಣೆ ವಾಹನಗಳಿಗೆ ರೂ.ಗಳಲ್ಲಿ	2000 ಕೆ.ಜಿ. ಮೀರಿದ ಆದರೆ 3000 ಕೆ.ಜಿ ಮೀರದ ಇಒಟ್ಟು ಭಾರ ಹೊಂದಿರುವ ಸರಕು ಸಾಗಾಣೆ ವಾಹನಗಳಿಗೆ ರೂ.ಗಳಲ್ಲಿ	3000 ಕೆ.ಜಿ. ಮೀರಿದ ಆದರೆ 5500 ಕೆ.ಜಿ ಮೀರದ ಇಒಟ್ಟು ಭಾರ ಹೊಂದಿರುವ ಸರಕು ಸಾಗಾಣೆ ವಾಹನಗಳಿಗೆ ರೂ.ಗಳಲ್ಲಿ
1	2	3	4	5
1.	1 ವರ್ಷದೊಳಗೆ	93,000	13,950	18,600
2.	1 ವರ್ಷಗಳು ಮೀರಿದ್ದು ಆದರೆ 2 ವರ್ಷಗಳು ಮೀರಿರದಿದ್ದಲ್ಲಿ	8,700	13,050	17,400
3.	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳು ಮೀರಿರದಿದ್ದಲ್ಲಿ	8,100	12,150	16.200
4.	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳು ಮೀರಿರದಿದ್ದಲ್ಲಿ	7,500	11,250	15,000

5.	4 ವರ್ಷಗಳು ಮೀರಿದ್ದು ಆದರೆ 5 ವರ್ಷಗಳು ಮೀರಿರದಿದ್ದಲ್ಲಿ	6,900	10,350	13,800
6.	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳು ಮೀರಿರದಿದ್ದಲ್ಲಿ	6,400	9,600	12,800
7.	6 ವರ್ಷಗಳು ಮೀರಿದ್ದು ಆದರೆ 7 ವರ್ಷಗಳು ಮೀರಿರದಿದ್ದಲ್ಲಿ	5,900	8,850	11,800
8.	7 ವರ್ಷಗಳು ಮೀರಿದ್ದು ಆದರೆ 8 ವರ್ಷಗಳು ಮೀರಿರದಿದ್ದಲ್ಲಿ	5,400	8,100	10,800
9.	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳು ಮೀರಿರದಿದ್ದಲ್ಲಿ	4,900	7,350	9,800
10.	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳು ಮೀರಿರದಿದ್ದಲ್ಲಿ	4,500	6,750	9,000
11.	10 ವರ್ಷಗಳು ಮೀರಿದ್ದು ಆದರೆ 11 ವರ್ಷಗಳನ್ನು ಮೀರಿರದಿದ್ದಲ್ಲಿ	4,100	6,150	8,200

12.	11 ವರ್ಷಗಳು ಮೀರಿದ್ದು ಆದರೆ 12 ವರ್ಷಗಳನ್ನು ಮೀರಿರದಿದ್ದಲ್ಲಿ	3,700	5,550	7,400
13.	12 ವರ್ಷಗಳು ಮೀರಿದ್ದು ಆದರೆ 13 ವರ್ಷಗಳನ್ನು ಮೀರಿರದಿದ್ದಲ್ಲಿ	3,300	4,950	6,600
14.	13 ವರ್ಷಗಳು ಮೀರಿದ್ದು ಆದರೆ 14 ವರ್ಷಗಳನ್ನು ಮೀರಿರದಿದ್ದಲ್ಲಿ	2,900	4,350	5,800
15.	14 ವರ್ಷಗಳು ಮೀರಿದ್ದು ಆದರೆ 15 ವರ್ಷಗಳನ್ನು ಮೀರಿರದಿದ್ದಲ್ಲಿ	2,500	3,750	5,000
16.	15 ವರ್ಷಗಳನ್ನು ಮೀರಿದ್ದಲ್ಲಿ	ಏನೂ ಇಲ್ಲ	ಏನೂ ಇಲ್ಲ	ಏನೂ ಇಲ್ಲ

(7) ಅನುಸೂಚಿಯ ಭಾಗ–ಸಿ5ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಭಾಗ ಸಿ6

[7(3)ನೇ ಪ್ರಕರಣ ನೋಡಿ]

ನಿರ್ಮಾಣ ಸಂಬಂಧಿತ ಯಂತ್ರ ಅಳವಡಿಸಲಾದ ವಾಹನಗಳು (ಕೇಂದ್ರ ಮೋಟಾರು ವಾಹನಗಳ ನಿಯಮ 1989ರ ನಿಯಮ 2ಸಿಎ ಅಡಿಯಲ್ಲಿ ಪರಿಭಾಷಿಸಲಾದಂತೆ) ಮತ್ತು ಏರ್ ಕಂಪ್ರೆಸ್ಸರ್ ಮತ್ತು ಜನರೇಟರ್‌ಗಳನ್ನು ಅಳವಡಿಸಿರುವ ವಾಹನಗಳ ಸಂಬಂಧದಲ್ಲಿ ಹಿಂದಿರುಗಿಸಬೇಕಾದುದಕ್ಕೆ ಸಂಬಂಧಪಟ್ಟ ಕೋಷ್ಠಕ

ಕ್ರ ಸಂ.	ವಾಹನದ ನೋಂದಣಿಯನ್ನು ತೆಗೆದು ಹಾಕಿದ್ದರೆ ಅಥವಾ ವಾಹನದ ನೋಂದಣಿಯನ್ನು ರದ್ದುಗೊಳಿಸಿದ್ದರೆ	ಹಿಂದಿರುಗಿಸಬೇಕಾದ ಆಜೀವ ತೆರಿಗೆಯ ಶೇಕಡವಾರು
1	2	3
1.	1 ವರ್ಷದೊಳಗೆ.	93%
2.	1 ವರ್ಷಗಳು ಮೀರಿದ್ದು ಆದರೆ 2 ವರ್ಷಗಳು ಮೀರಿರದಿದ್ದಲ್ಲಿ	87%
3.	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳು ಮೀರಿರದಿದ್ದಲ್ಲಿ	81%
4.	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳು ಮೀರಿರದಿದ್ದಲ್ಲಿ	75%
5.	4 ವರ್ಷಗಳು ಮೀರಿದ್ದು ಆದರೆ 5 ವರ್ಷಗಳು ಮೀರಿರದಿದ್ದಲ್ಲಿ	69%
6.	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳು ಮೀರಿರದಿದ್ದಲ್ಲಿ	64%
7.	6 ವರ್ಷಗಳು ಮೀರಿದ್ದು ಆದರೆ 7 ವರ್ಷಗಳು ಮೀರಿರದಿದ್ದಲ್ಲಿ	59%
8.	7 ವರ್ಷಗಳು ಮೀರಿದ್ದು ಆದರೆ 8 ವರ್ಷಗಳು ಮೀರಿರದಿದ್ದಲ್ಲಿ	54%
9.	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳು ಮೀರಿರದಿದ್ದಲ್ಲಿ	49%

10.	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳು ಮೀರಿರದಿದ್ದಲ್ಲಿ	45%
11.	10 ವರ್ಷಗಳು ಮೀರಿದ್ದು ಆದರೆ 11 ವರ್ಷಗಳು ಮೀರಿರದಿದ್ದಲ್ಲಿ	41%
